# ಶ್ರೀ ರಾಮ ರಕ್ಷಾ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ದಾಶರಥಾಯ ವಿದ್ಮಹೇ |

ಸೀತಾ ವಲ್ಲಭಾಯ ಧೀಮಹಿ |

ತನ್ನೋ ರಾಮಚಂದ್ರ ಪ್ರಚೋದಯಾತ್ ||

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ರಾಮ ರಕ್ಷಾ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**



**ವಿಶ್ವಪತಿ**
**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**

**SHRI DESIGNS**
**VEDIC LOGO DESIGNERS**
**www.lordofsevenhills.com**
**Cell : + 91 9849443752**
**Hyderabad**
**2021**

# ಶ್ರೀ ರಾಮ ರಕ್ಷಾ ವ್ರತ

**ಸಾಕ್ಷಾತ್ ಶ್ರೀ ಸ್ವಾಮಿಯವರಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© **ಸರ್ವಹಕ್ಕುಗಳು ರಚಯಿತನದು**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ**
**ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ**
**ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**
**Beside Sanghamitra School, Nizampet Road,**
**HYDERABAD – 500 085, India**
**Cell : + 91 9849443752**
**Email : viswapathi@yahoo.com, shridesigns@gmail.com**

# ಮುನ್ನುಡಿ

**ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ |**
**ಸಹಸ್ರನಾಮ ತತ್ತುಲ್ಯಂ ರಾಮ ನಾಮ ವರಾನನೇ ||**

ಶ್ರೀರಾಮನಾಮವು ಮಹಾಮಹಿಮಾನ್ವಿತವಾದದ್ದು. ಅತ್ಯಂತ ಶಕ್ತಿವಂತವಾದದ್ದು. ಸಮಸ್ತ ಶ್ರೇಯಸ್ಸುಗಳನ್ನು ಅನುಗ್ರಹಿಸುತ್ತದೆ. ಯಾವಾಗಲೂ ಆ ಶ್ರೀರಾಮನಾಮವನ್ನು ಸ್ಮರಿಸುತ್ತಿರುವವರಿಗೆ ಯಾವುದೇ ಅಪಾಯ ಹತ್ತಿರ ಸುಳಿಯುವುದಿಲ್ಲ. ಆ ಶ್ರೀ ರಾಮಚಂದ್ರನು ಯಾವಾಗಲೂ ಅವರ ಹಿಂದೆಯೇ ಇದ್ದು ಅವರನ್ನು ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಿರುತ್ತಾನೆ. ಈ ಶ್ರೀರಾಮನಾಮವನ್ನು ಎಷ್ಟುಬಾರಿ ಸ್ಮರಿಸಿದರೆ ಅಷ್ಟು ಜಾಸ್ತಿಯಾಗಿ ಫಲವನ್ನು ಕೊಡುತ್ತದೆ. ಈ ದಿವ್ಯನಾಮವನ್ನು ಯಾರೂ ಪಠಿಸಬಹುದಾದಷ್ಟು ಸುಲಭದ್ದು. ಶ್ರೀರಾಮನಾಮವು ಕೈಯಿಡಿದ ಎಲ್ಲ ಕೆಲಸಕಾರ್ಯಗಳಲ್ಲಿ ಜಯವನ್ನು ಕೊಡುತ್ತದೆ.

ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ, ನಾನು ಇಲ್ಲಿಯವರೆಗೆ ಆ ಸ್ವಾಮಿಯ ಲೀಲೆಗಳ ಮೇಲೆ ಹದಿನಾರು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಆ ಎಲ್ಲಾ ಪುಸ್ತಕಗಳು ಭಕ್ತರಿಗೆ ಅತ್ಯಾನಂದವನ್ನು ತರುತ್ತಿದೆ ಎಂದರೆ ಅದೆಲ್ಲಾ ಆ ಸ್ವಾಮಿಯ ಅನುಗ್ರಹವಲ್ಲದೆ ಬೇರೆ ಇನ್ನೇನೂ ಅಲ್ಲ. ಈ ರಚಿಸಿದ ಪುಸ್ತಕಗಳಲ್ಲಿ ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ  ಭಕ್ತರನ್ನು ಬಹಳ ಆನಂದಪಡಿಸುತ್ತಿವೆ. ಈ ಮೂರು ವ್ರತಗಳನ್ನು ನಿತ್ಯವೂ ಅನೇಕ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿವೆ. ಇದಕ್ಕೆ ಮಿಗಿಲಾದ ಭಾಗ್ಯವೇನಿದೆ?

ನನ್ನನ್ನು ಕೆಲವು ಸಂವತ್ಸರಗಳಿಂದ ಕೆಲವುಮಂದಿ ಮಿತ್ರರು ಶ್ರೀ ರಾಮಚಂದ್ರನ ಯಾವುದಾದರೂ  ವ್ರತವನ್ನು ಬರೆಯಬೇಕೆಂದು ಹೇಳುತ್ತಿದ್ದರು. ಆ ಶ್ರೀ ರಾಮಚಂದ್ರನ ಅನುಗ್ರಹದಿಂದ ಅದು ಇಷ್ಟುವರ್ಷಗಳ ನಂತರ ನೆರವೇರಿತು. ಯಾವುದೇ ದೇವತೆಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಬರೆಯಲು, ಆ ದೇವರ ಅನುಗ್ರಹವಿಲ್ಲದೇ ಒಂದು ಅಕ್ಷರ ಕೂಡ ಬರೆಯಲು ಆಗುವುದಿಲ್ಲ. ಈ ಪುಸ್ತಕದ ರಚನೆಯು ಕೂಡಾ ಹಾಗೇ ಆಯಿತು. ಒಂದುದಿನ ಮಧ್ಯಾಹ್ನದ ಸಮಯದಲ್ಲಿ ಒಬ್ಬ ಆಜಾನುಬಾಹು ಆಚಾರ್ಯ ಪುರುಷನು ನಮ್ಮ ಮನೆಗೆ ಬರುವುದಾಯಿತು. ನಾನು ರಚಿಸಿದ ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ ಪುಸ್ತಕಗಳನ್ನು ತೆಗೆದುಕೊಂಡು, ತಾನು ನಮ್ಮ ಮನೆ ಹತ್ತಿರದ ಕಾಲೋನಿಯಲ್ಲಿರುವ ಒಂದು ಶ್ರೀ ರಾಮ ದೇವಾಲಯದಿಂದ ಬಂದೆನೆಂದನು. ಶ್ರೀ ರಾಮ ವ್ರತವನ್ನು ತಪ್ಪದೆ ಬರೆಯಿರಿ ಎಂದು ನನಗೆ ಹೇಳಿದನು. ನಾನು ಏನೋ ಆಲೋಚಿಸುತ್ತಿರುವಾಗ ಅವನು ಪುನಃ ಅದೇ ಮಾತನ್ನು ಹೇಳಿದನು. ಖಂಡಿತಾ ಆ ಶ್ರೀ ರಾಮಚಂದ್ರನ ವ್ರತವನ್ನು ರಚಿಸಬೇಕೆಂದು ಹೇಳಿದನು. ನಾನು 'ಆ ಸ್ವಾಮಿಯ ಅನುಗ್ರಹವಾದಾಗ ಬರೆಯುತ್ತೇನೆ' ಎಂದು ಹೇಳಿದೆನು. ಆನಂತರ ಆಲೋಚಿಸಿದರೆ, ಆ ಆಚಾರ್ಯರು ಹೇಳಿದ ಪ್ರದೇಶದಲ್ಲಿ ಶ್ರೀ ರಾಮನ ದೇವಾಲಯವು ಇದ್ದಹಾಗೆ ನಾನು ಯಾವುತ್ತು ಕೇಳಿರಲಿಲ್ಲ. ಇನ್ನು ಆಶ್ಚರ್ಯದ ವಿಷಯವೇನೆಂದರೆ, ಪುನಃ ಬೇಗನೆ ಮರಳಿಬರುತ್ತೆಂದು ಹೇಳಿ ಹೊರಟು ಹೋದವರು, ಇವತ್ತಿಗೂ ಮರಳಿ ಬರಲಿಲ್ಲ. ಬಹುಷ ಶ್ರೀ ರಾಮಚಂದ್ರನೇ ಆ ರೂಪದಲ್ಲಿ ಬಂದು ದರ್ಶನ ಕೊಟ್ಟನೆಂಬ  ಭಾವನೆ ಬರುತ್ತಿರುತ್ತದೆ. ಮತ್ತೊಂದು ವಿಶೇಷವೇನೆಂದರೆ, ಈ ಘಟನೆ ಜರುಗಿದ

ಸಂವತ್ಸರವೇ ನನಗೆ ಭದ್ರಾಚಲಂ ಶ್ರೀ ಸೀತಾರಾಮಚಂದ್ರುರ ಕಲ್ಯಾಣ ಮಹೋತ್ಸವದ ಮಂತ್ರಾಕ್ಷತೆಯೊಟ್ಟಿಗೆ ಮುತ್ತುಗಳನ್ನು ಕೂಡಾ, ಅಲ್ಲಿಯವರೆಗೆ ಪರಿಚಯವೇ ಇಲ್ಲದ ಭಕ್ತರು ತಂದು ಕೊಡುವುದಾಯಿತು. ಶ್ರೀ ಸ್ವಾಮಿಯ ಕಲ್ಯಾಣ ಮಹೋತ್ಸವದ ಮುತ್ತುಗಳನ್ನು ನಾನು ನೋಡುವುದು ಅದೇ ಮೊದಲು.

ಮತ್ತೊಂದು ವಿಶೇಷವೇನೆಂದರೆ, ಈ ವ್ರತ ಪುಸ್ತಕದ ಡಿ.ಟಿ.ಪಿ. ಕೆಲಸವು ಆಕಸ್ಮಿಕವಾಗಿ ಶ್ರೀ ಸ್ವಾಮಿಯ ಜನ್ಮನಕ್ಷತ್ರುವಾದ ಪುನರ್ವಸು ನಕ್ಷತ್ರುದ ದಿನವೇ ಪ್ರಾರಂಭವಾಗುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ತಿರುಪತಿಯಲ್ಲಿ ಶ್ರೀ ಕೋದಂಡರಾಮ ಸ್ವಾಮಿಯ ದೇವಾಲಯದ ಪವಿತ್ರುಉತ್ಸವವು ಜರುಗುತ್ತಿದ್ದ ಕೊನೆಯದಿನ ಕೂಡಾ ಈ ದಿನವೇ ಆಗಿರುವದು ಬಹಳ ವಿಶೇಷವೆಂದು ಭಾವಿಸುತ್ತಿದ್ದೇನೆ.

ಈ ಶ್ರೀ ರಾಮ ರಕ್ಷಾ ವ್ರತವು ಪೂರ್ತಿಯಾಗಿ ಆ ಸ್ವಾಮಿಯ ಅನುಗ್ರಹದಿಂದ ರಚಿಸುವುದು ಸಾಧ್ಯವಾಯಿತು. ಲೇಖನಿಯನ್ನು ಹಿಡಿದ್ದದ್ದು ನಾನಾದರೂ, ಪ್ರತಿ ಅಕ್ಷರವು ಆ ಸ್ವಾಮಿಯ ಅನುಗ್ರಹವೆಂದೇ ಭಾವಿಸುತ್ತಿದ್ದೇನೆ. ಈ ವ್ರತವನ್ನು ಆಚರಿಸುವುದು ಬಹಳ ಸುಲಭ. ಆಚರಿಸಿದ ಪ್ರತೀಯೊಬ್ಬ ಭಕ್ತನಿಗೂ ಆ ಶ್ರೀ ಸೀತಾರಾಮಚಂದ್ರುರ ಅನುಗ್ರುಹವಾಗಬೇಕೆಂದು ಆ ಸ್ವಾಮಿಯನ್ನು ಮನಸಾರೆ ಬೇಡಿಕೊಳ್ಳುತ್ತಿದ್ದೇನೆ.

ಈ ಪುಸ್ತಕದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತೀಯೊಬ್ಬರಿಗೂ, ಈ ವ್ರತವನ್ನು ಭಕ್ತಿಯಿಂದ ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದವರಿಗೂ, ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಸಕಲ ಸೌಭಾಗ್ಯ, ಆಯುರಾರೋಗ್ಯಗಳನ್ನು ಅನುಗ್ರುಹಿಸಬೇಕೆಂದು ಆ ಸೀತಾರಾಮಚಂದ್ರುರನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||
|| ಶ್ರೀ ಸೀತಾರಾಮಚಂದ್ರು ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

***********

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ ಅಥವಾ ಪುನರ್ವಸು, ಶ್ರವಣ ನಕ್ಷತ್ರದ ದಿನಗಳಲ್ಲಾಗಲೀ ಪಠಿಸಿದರೆ ಮತ್ತಷ್ಟು ಶುಭಪ್ರದ. ಬುಧವಾರ ಅಥವಾ ಶನಿವಾರದ ದಿನ ಪಠಣಮಾಡಿದರೆ ಅತ್ಯಂತ ಶುಭಪ್ರದ. ಚೈತ್ರ, ವೈಶಾಖ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಈ ವ್ರತವನ್ನು ಆಚರಿಸಿದರೆ ಜನ್ಮ ಜನ್ಮದ ಪಾಪಗಳು ನಶಿಸುತ್ತವೆ. ಬಹಳ ಪುಣ್ಯವು ಲಭಿಸುತ್ತದೆ. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಈ ವ್ರತವನ್ನು ಆಚರಿಸುವ ಮೊದಲು ಒಂದುಸಾರಿ ಮನಸ್ಸಿನಲ್ಲೇ ಶ್ರೀ ಗಣಪತಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ನಕ್ಷತ್ರ ಮತ್ತು ಗೋತ್ರವನ್ನು ಮನಸ್ಸಿನಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಶ್ರೀ ಸೀತಾರಾಮಚಂದ್ರುರ ಅಷ್ಟೋತ್ತರ ನಾಮಗಳನ್ನು ಪಠಿಸಬೇಕು. ಶ್ರೀ ದೇವರ ಅಂಗ ಪೂಜೆಮಾಡಿ, ನಂತರಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ ದೇವರಿಗೆ ನಿಮ್ಮ ಯೋಗ್ಯತಾನುಸಾರ ಯಾವುದಾದರು ಹಣ್ಣನ್ನು ಸಮರ್ಪಿಸಬೇಕು.

- ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮವಿಲ್ಲ. ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ, ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಅನುಕೂಲವಾದರೆ ಇಬ್ಬರೊಟ್ಟಿಗೆ ಆಚರಿಸಬಹುದು.

- ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಮಹಿಳೆಯರು ಕೂಡ ನೀರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶಾಂತಿ ಉಂಟಾಗುತ್ತದೆ.

- ಪ್ರತಿ ಶನಿವಾರದ ದಿನ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ, ಸ್ವಾಮಿಗೆ ಬಾಳೆಹಣ್ಣು, ಕೋಸಂಬರಿ, ಪಾನಕವನ್ನು ನೈವೇದ್ಯವಿಟ್ಟು, ಸ್ವೀಕರಿಸಿದರೆ ಯಾವುದೇ ರೀತಿಯ ಅನಾರೋಗ್ಯವಾದರೂ ಕೂಡಲೆ ವಾಸಿಯಾಗುತ್ತದೆ. ಯಾವುದೇ ರೀತಿಯ ಅಪಾಯಗಳು ಉಂಟಾಗುವುದಿಲ್ಲ. ಅಪಮೃತ್ಯು ಭಯವು ಇರುವುದಿಲ್ಲ. ಈ ಕಥೆಗಳನ್ನು ಓದಲು ಶಕ್ತಿಯಿಲ್ಲದವರಿಗೆ, ಅವರ ಬಂಧುಬಳಗದವರು ಯಾರಾದರೂ ಓದಿ, ಕೇಳಿಸಿದರೆ, ಮಹಾಫಲವು ಸಿಗುತ್ತದೆ.

- ಪ್ರತಿ ಶನಿವಾರದ ದಿನ ಶ್ರೀ ಸೀತಾರಾಮಚಂದ್ರುರ ದೇವಾಲಯದಲ್ಲಿ ಅರ್ಚಕರಿಂದ ಈ ಪುಸ್ತಕವನ್ನು ಪಠಿಸಿದರೆ, ಆ ದೇವಾಲಯಗಳು ಮಹಾಮಾನ್ವಿತವಾದ ದಿವ್ಯಕ್ಷೇತ್ರವೆಂದು

ಹೆಸರೊಂದುತ್ತದೆ. ಅಲ್ಲಿಗೆ ಬರುವ ಭಕ್ತರೆಲ್ಲರಿಗೂ ಶ್ರೀ ಸೀತಾರಾಮಚಂದ್ರುರ ಅನುಗ್ರಹವು ಸಿಕ್ಕಿ ಸುಖಸಂತೋಷಗಳಿಂದ ಜೀವಿಸುತ್ತಾರೆ.

❖ ಶ್ರೀ ರಾಮಚಂದ್ರುನ ಯಾವುದೇ ದಿವ್ಯಕ್ಷೇತ್ರು ಅಥವಾ ಯಾವುದೇ ಪುಣ್ಯಕ್ಷೇತ್ರುಗಳಲ್ಲಾಗಲೀ ಈ ವ್ರತವನ್ನು ಆಚರಿಸಿದರೆ ಕೆಲವು ಕೋಟಿ ಜನ್ಮದ ಪಾಪವು ನಶಿಸುತ್ತದೆ. ವ್ರತವನ್ನು ಆಚರಿಸಿದ ಕೂಡಲೇ ಶರೀರದಲ್ಲಿಯ ರೋಗಗಳೆಲ್ಲಾ ನಿವಾರಣೆಯಾಗುತ್ತದೆ. ಶರೀರಕ್ಕೆ ಹೊಸ ತೇಜಸ್ಸು ಉಂಟಾಗುತ್ತದೆ. ದೀರ್ಘಾಯುಷ್ಯದಿಂದ ಸುಖವಾಗಿ ಜೀವಿಸುತ್ತಾರೆ.

❖ ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನಿಮ್ಮ ಬಂಧುಗಳ ನಿಮಿತ್ತ, ನೀವು ಕೂಡ ಓದಬಹುದು. ಅವರಿಗೆ ವಿದ್ಯೆ, ವಿವಾಹ, ಸಂತಾನ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಕ್ರುಮವಾಗಿ ಮೂರು ಶನಿವಾರಗಳು ಸ್ವಾಮಿಯ ದೇವಾಲಯದಲ್ಲಾಗಲೀ ಅಥವಾ ನಿಮ್ಮ ಮನೆಯಲ್ಲಾಗಲೀ ಓದಿದರೆ ತಕ್ಷಣ ಫಲಿತವು ಸಿಗುತ್ತದೆ.

❖ ಅನುಕೂಲವಾದರೆ ಈ ವ್ರತವನ್ನು ಪುರೋಹಿತರ ಸಹಾಯದಿಂದ ಆಚರಿಸಿದರೆ ಒಳ್ಳೆಯದು. ಕಲಶ ಸ್ಥಾಪನೆ ಮಾಡಿ ಅಷ್ಟದಿಕ್ಪಾಲಕರನ್ನು, ನವಗ್ರಹದೇವತೆಗಳನ್ನು, ಲೋಕಪಾಲಕರನ್ನು ಮಂಟಪದಲ್ಲಿ ಆಯಾ ದಿಕ್ಕಿನಲ್ಲಿ ಆವಾಹನೆ ಮಾಡಿ ಪೂರ್ತಿ ವಿಧಾನದಿಂದ ಈ ವ್ರತವನ್ನು ಆಚರಿಸಿದರೆ ಶುಭಪ್ರುದ.

❖ ಯಾವುದಾದರೂ ಶುಭಕಾರ್ಯವನ್ನು ಮಾಡುವ ಮೊದಲು, ಈ ವ್ರತವನ್ನು ಆಚರಿಸಿದರೆ, ಶ್ರೀ ಸೀತಾರಾಮಚಂದ್ರುರ ಅನುಗ್ರಹದಿಂದ ಆ ಕೆಲಸಕಾರ್ಯವು ವಿಜಯವಂತಾಗುತ್ತದೆ. ಮನಸ್ಸಿನಲ್ಲಿ ಅಶಾಂತಿಯಿದ್ದಾಗ ಅಥವಾ ಅನಿರೀಕ್ಷಿತವಾಗಿ ಯಾವುದಾರೂ ಕಷ್ಟಬಂದಾಗ ತಿಥಿ, ವಾರ, ನಕ್ಷತ್ರುಗಳನ್ನು ನೋಡದೆ, ಈ ವ್ರತವನ್ನು ಆಚರಿಸಬಹುದು. ಆ ಸ್ವಾಮಿಯ ಅನುಗ್ರುದಿಂದ ಮನಸ್ಸು ಪ್ರುಶಾಂತವಾಗಿ, ಆ ಕಷ್ಟವು ತಕ್ಷಣ ನಿವಾರಣೆಯಾಗುತ್ತದೆ.

ಈ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನದಲ್ಲಾಗಲಿ ಈ ಪುಸ್ತಕವನ್ನು ಓದಿ, ಶ್ರೀ ಸೀತಾರಾಮಚಂದ್ರುರ ಅನುಗ್ರಹವನ್ನು ಪಡೆಯಬಹುದು.

*******

# ಶ್ರೀ ರಾಮ ರಕ್ಷಾ ವ್ರತ

## ಅಥ ಅಂಗ ಪೂಜ

ಓಂ ಶ್ರೀ ರಾಮಾಯ ನಮಃ | ಪಾದೌ ಪೂಜಯಾಮಿ |
ಓಂ ಶ್ರೀ ರಾಮಭದ್ರಾಯ ನಮಃ | ಜಂಘೇ ಪೂಜಯಾಮಿ |
ಓಂ ಶ್ರೀ ರಾಮಚಂದ್ರಾಯ ನಮಃ | ಜಾನುನೀ ಪೂಜಯಾಮಿ |
ಓಂ ಶಾಶ್ವತಾಯ ನಮಃ | ಊರೂ ಪೂಜಯಾಮಿ |
ಓಂ ಕಟಿವಲ್ಲಭಾಯ ನಮಃ | ಕಟಿಂ ಪೂಜಯಾಮಿ |
ಓಂ ದಶರಥಾತ್ಮಜಾಯ ನಮಃ | ಉದರಂ ಪೂಜಯಾಮಿ |
ಓಂ ಕೋಸಲೇಯಾಯ ನಮಃ | ನಾಭಿO ಪೂಜಯಾಮಿ |
ಓಂ ಲಕ್ಷ್ಮಣಾಗ್ರಜಾಯ  ನಮಃ | ವಕ್ಷಸ್ಥಲಂ ಪೂಜಯಾಮಿ |
ಓಂ ಕೌಸ್ತುಭಾಭರಣಾಯ ನಮಃ | ಕಂಠಂ ಪೂಜಯಾಮಿ |
ಓಂ ರಾಜರಾಜಾಯ ನಮಃ | ಸ್ಕಂದೌ ಪೂಜಯಾಮಿ  |
ಓಂ ಕೋದಂಡಧರಾಯ ನಮಃ | ಬಾಹುಂ ಪೂಜಯಾಮಿ |
ಓಂ ಭರತಾಗ್ರಜಾಯ ನಮಃ | ವದನಂ ಪೂಜಯಾಮಿ |
ಓಂ ಪದ್ಮಾಕ್ಷಾಯ ನಮಃ | ನೇತ್ರೇ ಪೂಜಯಾಮಿ |
ಓಂ ಸರ್ವೇಶ್ವರಾಯ ನಮಃ | ಶಿರಃ ಪೂಜಯಾಮಿ |
ಓಂ ಶ್ರೀ ರಾಮಚಂದ್ರ ಪರಬ್ರಹ್ಮಣೇ ನಮಃ | ಸರ್ವಾಣ್ಯಾOಗಾನಿ ಪೂಜಯಾಮಿ |
ಶ್ರೀ ರಾಮಚಂದ್ರ ಸ್ವಾಮಿನೇ ನಮಃ | ದಿವ್ಯಸುಂದರವಿಗ್ರಹಂ ಪೂಜಯಾಮಿ ||

*******

## ಶ್ರೀ ರಾಮಾಷ್ಟೋತ್ತರ ಶತನಾಮಾವಳಿ:

ಓಂ ಶ್ರೀರಾಮಾಯ ನಮಃ |
ಓಂ ರಾಮಭದ್ರಾಯ ನಮಃ |
ಓಂ ರಾಮಚಂದ್ರಾಯ ನಮಃ |
ಓಂ ಶಾಶ್ವತಾಯ ನಮಃ |
ಓಂ ರಾಜೀವಲೋಚನಾಯ ನಮಃ |
ಓಂ ಶ್ರೀಮತೇ ನಮಃ |
ಓಂ ರಾಜೇಂದ್ರಾಯ ನಮಃ |
ಓಂ ರಘುಪುಂಗವಾಯ ನಮಃ |
ಓಂ ಜಾನಕಿವಲ್ಲಭಾಯ ನಮಃ |
ಓಂ ಜೈತ್ರಾಯ ನಮಃ | (10)
ಓಂ ಜಿತಾಮಿತ್ರಾಯ ನಮಃ |
ಓಂ ಜನಾರ್ದನಾಯ ನಮಃ |
ಓಂ ವಿಶ್ವಾಮಿತ್ರಪ್ರಿಯಾಯ ನಮಃ |
ಓಂ ದಾಂತಯ ನಮಃ |

ಓಂ ಶರಣತ್ರಾಣತತ್ಪರಾಯ ನಮಃ|
ಓಂ ವಾಲಿಪ್ರಮಥನಾಯ ನಮಃ|
ಓಂ ವಾಗ್ಮಿನೆ ನಮಃ|
ಓಂ ಸತ್ಯವಾಚೇ ನಮಃ|
ಓಂ ಸತ್ಯವಿಕ್ರಮಾಯ ನಮಃ|
ಓಂ ಸತ್ಯವ್ರತಾಯ ನಮಃ| (20)
ಓಂ ವ್ರತಧರಾಯ ನಮಃ|
ಓಂ ಸದಾಹನುಮದಾಶ್ರಿತಾಯ ನಮಃ|
ಓಂ ಕೋಸಲೇಂದ್ರಾಯ ನಮಃ|
ಓಂ ಖರಧ್ವಂಸಿನೇ ನಮಃ|
ಓಂ ವಿರಾಧವಧಪಂಡಿತಾಯ ನಮಃ|
ಓಂ ವಿಭೀಷಣಪರಿತ್ರಾತ್ರೈ ನಮಃ|
ಓಂ ಹರಕೋದಂಡಖಂಡನಾಯ ನಮಃ|
ಓಂ ಸಪ್ತತಾಳ ಪ್ರಭೇತ್ರೈ ನಮಃ|
ಓಂ ದಶಗ್ರೀವಶಿರೋಹರಾಯ ನಮಃ|
ಓಂ ಜಾಮದಗ್ನ್ಯಮಹಾದರ್ಪದಳನಾಯ ನಮಃ| (30)
ಓಂ ತಾಟಕಾಂತಕಾಯ ನಮಃ|
ಓಂ ವೇದಾಂತಸಾರಾಯ ನಮಃ|
ಓಂ ವೇದಾತ್ಮನೇ ನಮಃ|
ಓಂ ಭವರೋಗಸ್ಯಭೇಷಜಾಯ ನಮಃ|
ಓಂ ಭೂಷಣತ್ರಿಶಿರೋಹತ್ರೈ ನಮಃ|
ಓಂ ತ್ರಿಮೂರ್ಥಯೇ ನಮಃ|
ಓಂ ತ್ರಿಗುಣಾತ್ಮಕಾಯ ನಮಃ|
ಓಂ ತ್ರಿವಿಕ್ರಮಾಯ ನಮಃ|
ಓಂ ತ್ರಿಲೋಕಾತ್ಮನೇ ನಮಃ|
ಓಂ ಪುಣ್ಯಚಾರಿತ್ರಕೀರ್ತನಾಯ ನಮಃ| (40)
ಓಂ ತ್ರಿಲೋಕರಕ್ಷಕಾಯ ನಮಃ|
ಓಂ ಧನ್ವಿನೇ ನಮಃ|
ಓಂ ದಂಡಕಾರಣ್ಯಕರ್ತನಾಯ ನಮಃ|
ಓಂ ಅಹಲ್ಯಾಶಾಪಶಮನಾಯ ನಮಃ|
ಓಂ ಪಿತೃಭಕ್ತಾಯ ನಮಃ|
ಓಂ ವರಪ್ರದಾಯ ನಮಃ|
ಓಂ ಜಿತೇOದ್ರಿಯಾಯ ನಮಃ|
ಓಂ ಜಿತಕ್ರೋಧಾಯ ನಮಃ|
ಓಂ ಜಿತಾಮಿತ್ರಾಯ ನಮಃ|
ಓಂ ಜಗದ್ಗುರವೇ ನಮಃ| (50)
ಓಂ ವೃಕ್ಷವಾನರಸಂಘಾತಿನೇ ನಮಃ|
ಓಂ ಚಿತ್ರಕೂಟಸಮಾಶ್ರಯಾಯ ನಮಃ|

ಓಂ ಜಯಂತತ್ರಾಣವರದಾಯ ನಮಃ |
ಓಂ ಸುಮಿತ್ರಾಪುತ್ರಸೇವಿತಾಯ ನಮಃ |
ಓಂ ಸರ್ವದೇವಾದಿ ದೇವಾಯ ನಮಃ |
ಓಂ ಮೃತವಾನರಜೀವನಾಯ ನಮಃ |
ಓಂ ಮಾಯಾಮಾರೀಚಹಂತ್ರೇ ನಮಃ |
ಓಂ ಮಹಾದೇವಾಯ ನಮಃ |
ಓಂ ಮಹಾಭುಜಾಯ ನಮಃ |
ಓಂ ಸರ್ವದೇವಸ್ತುತಾಯ ನಮಃ | (60)
ಓಂ ಸೌಮ್ಯಾಯ ನಮಃ |
ಓಂ ಬ್ರಹ್ಮಣ್ಯಾಯ ನಮಃ |
ಓಂ ಮುನಿಸಂಸ್ತುತಾಯ ನಮಃ |
ಓಂ ಮಹಾಯೋಗಿನೇ ನಮಃ |
ಓಂ ಮಹೋದರಾಯ ನಮಃ |
ಓಂ ಸುಗ್ರೀವೇಪ್ಸಿತರಾಜ್ಯದಾಯ ನಮಃ |
ಓಂ ಸರ್ವಪುಣ್ಯಾಧಿಕ ಫಲಾಯ ನಮಃ |
ಓಂ ಸ್ಮೃತಸರ್ವಘನಾಶನಾಯ ನಮಃ |
ಓಂ ಆದಿಪುರುಷಾಯ ನಮಃ |
ಓಂ ಪರಮಪುರುಷಾಯ ನಮಃ | (70)
ಓಂ ಮಹಾಪುರುಷಾಯ ನಮಃ |
ಓಂ ಪುಣ್ಯೋದಯಾಯ ನಮಃ |
ಓಂ ದಯಾಸಾರಾಯ ನಮಃ |
ಓಂ ಪುರುಷೋತ್ತಮಾಯ ನಮಃ |
ಓಂ ಸ್ಮಿತವಕ್ತ್ರಾಯ ನಮಃ |
ಓಂ ಮಿತಭಾಷಿಣೇ ನಮಃ |
ಓಂ ಪೂರ್ವಭಾಷಿಣೇ ನಮಃ |
ಓಂ ರಾಘವಾಯ ನಮಃ |
ಓಂ ಅನಂತಗುಣಗಂಭೀರಾಯ ನಮಃ |
ಓಂ ಧೀರೋದಾತ್ತಗುಣೋತ್ತಮಾಯ ನಮಃ | (80)
ಓಂ ಮಾಯಾಮಾನುಷಚಾರಿತ್ರಾಯ ನಮಃ |
ಓಂ ಮಹಾದೇವಾದಿಪೂಜಿತಾಯ ನಮಃ |
ಓಂ ಸೇತುಕೃತೇ ನಮಃ |
ಓಂ ಜಿತವಾರಾಶಯೇ ನಮಃ |
ಓಂ ಸರ್ವತೀರ್ಥಮಯಾಯ ನಮಃ |
ಓಂ ಹರಯೇ ನಮಃ |
ಓಂ ಶ್ಯಾಮಾಂಗಾಯ ನಮಃ |
ಓಂ ಸುಂದರಾಯ ನಮಃ |
ಓಂ ಶೂರಾಯ ನಮಃ |
ಓಂ ಪೀತವಾಸನೇ ನಮಃ | (90)

ಓಂ ಧನುರ್ಧರಾಯ ನಮಃ |
ಓಂ ಸರ್ವಯಜ್ಞಾಧಿಪಾಯ ನಮಃ |
ಓಂ ಯಜ್ವಿನೇ ನಮಃ |
ಓಂ ಜರಾಮರಣವರ್ಜಿತಾಯ ನಮಃ |
ಓಂ ವಿಭೀಷಣಪ್ರತಿಷ್ಠಾತ್ರೇ ನಮಃ |
ಓಂ ಸರ್ವಾಪಗುಣವರ್ಜಿತಾಯ ನಮಃ |
ಓಂ ಪರಮಾತ್ಮನೇ ನಮಃ |
ಓಂ ಪರಬ್ರಹ್ಮಣೇ ನಮಃ |
ಓಂ ಸಚ್ಚಿದಾನಂದವಿಗ್ರಹಾಯ ನಮಃ |
ಓಂ ಪರಸ್ಮೈಧಾಮ್ನೆ ನಮಃ | (100)
ಓಂ ಪರಾಕಾಶಾಯ ನಮಃ |
ಓಂ ಪರಾತ್ಪರಾಯ ನಮಃ |
ಓಂ ಪರೇಶಾಯ ನಮಃ |
ಓಂ ಪಾರಣಾಯ ನಮಃ |
ಓಂ ಪಾರಗಾಯ ನಮಃ |
ಓಂ ಅವಾರಾಯ ನಮಃ |
ಓಂ ಸರ್ವದೇವತ್ಮಕಾಯ ನಮಃ |
ಓಂ ಪರಸ್ಮೈ ನಮಃ | (108)

**|| ಶ್ರೀ ರಾಮಾಷ್ಟೋತ್ತರ ಅಷ್ಟೋ ಶತನಾಮಾವಳಿ: ಸಮಾಪ್ತಂ ||**

***********

## ಶ್ರೀ ಸೀತಾಷ್ಟೋತ್ತರ ಶತನಾಮಾವಳಿ:

ಓಂ ಶಾಂತಾಯ್ಯೆ ನಮಃ |
ಓಂ ಮಹೇಶ್ವರ್ಯೈ ನಮಃ |
ಓಂ ನಿತ್ಯಾಯ್ಯೆ ನಮಃ |
ಓಂ ಶಾಶ್ವತ್ಯೈ ನಮಃ |
ಓಂ ಪರಮಾಯ್ಯೆ ನಮಃ |
ಓಂ ಅಕ್ಷರಾಯ್ಯೆ ನಮಃ |
ಓಂ ಅಚಿಂತ್ಯಾಯ್ಯೆ ನಮಃ |
ಓಂ ಕೇವಲಾಯ್ಯೆ ನಮಃ |
ಓಂ ಅನಂತಾಯ್ಯೆ ನಮಃ |
ಓಂ ಶಿವಾತ್ಮನೇ ನಮಃ | (10)
ಓಂ ಪರಮಾತ್ಮಿಕಾಯ್ಯೆ ನಮಃ |
ಓಂ ಜಾನಕ್ಯೈ ನಮಃ |
ಓಂ ಮಿಥಿಲಾನಂದಾಯ್ಯೆ ನಮಃ |
ಓಂ ರಕ್ಷಸಾಂತನಿಧಾಯಿನ್ಯೈ ನಮಃ |

ಓಂ ರಾವಣಾತಕತ್ರ್ಯೈ ನಮಃ |
ಓಂ ರಮ್ಯಾಯೈ ನಮಃ |
ಓಂ ರಾಮವಕ್ಷಸ್ಥಲಸ್ಥಿತಾಯೈ ನಮಃ |
ಓಂ ಪ್ರಾಣೇಶ್ವರ್ಯೈ ನಮಃ |
ಓಂ ಪ್ರಾಣರೂಪಯೈ ನಮಃ |
ಓಂ ಪ್ರಧಾನಪುರುಷೇಶ್ವರ್ಯೈ ನಮಃ | (20)
ಓಂ ಸರ್ವಶಕ್ತ್ಯೈ ನಮಃ |
ಓಂ ಕಾಲಾಯ ನಮಃ |
ಓಂ ಕಾಷ್ಠಾಯೈ ನಮಃ |
ಓಂ ಜ್ಯೋಸ್ತ್ನಯೈ ನಮಃ |
ಓಂ ಇಂದುಮಹಿಮಾಸ್ಪಧಾಯೈ ನಮಃ |
ಓಂ ಪುರಾಣ್ಯೈ ನಮಃ |
ಓಂ ಚಿನ್ಮಯೈ ನಮಃ |
ಓಂ ಪುಂಸಾಮಧ್ಯಾಯೈ ನಮಃ |
ಓಂ ಭೂತಾಂತರರೂರಿಣ್ಯೈ ನಮಃ |
ಓಂ ಭೂತಾಂತರಾತ್ಮನೇ ನಮಃ | (30)
ಓಂ ಕೂಟಸ್ಥಾಯೈ ನಮಃ |
ಓಂ ಮಹಾಪುರುಷಸಂಜ್ಞಿತಾಯೈ ನಮಃ |
ಓಂ ಸ್ವವಾಯಾರ್ಯೈ ನಮಃ |
ಓಂ ಕಾರ್ಯಜನನ್ಯೈ ನಮಃ |
ಓಂ ಬ್ರಹ್ಮಸ್ಯಾಯೈ ನಮಃ |
ಓಂ ಬ್ರಹ್ಮಸಂಶ್ರಯಾಯೈ ನಮಃ |
ಓಂ ವ್ಯಕ್ತಾಯೈ ನಮಃ |
ಓಂ ಪ್ರಥಮಜಾಯೈ ನಮಃ |
ಓಂ ಬ್ರಾಹ್ಮ್ಯೈ ನಮಃ |
ಓಂ ಮಹಾತ್ಯೈ ನಮಃ | (40)
ಓಂ ಜ್ಞಾನರೂಪಿಣ್ಯೈ ನಮಃ |
ಓಂ ಮಹೇಶ್ವರ್ಯೈ ನಮಃ |
ಓಂ ಸಮುಸ್ಥಾನಾಯೈ ನಮಃ |
ಓಂ ಭುಕ್ತಿಮುಕ್ತಿ ಫಲಪ್ರದಾಯೈ ನಮಃ |
ಓಂ ಸರ್ವೇಶ್ವರ್ಯೈ ನಮಃ |
ಓಂ ಸರ್ವವರ್ಣಾಯೈ ನಮಃ |
ಓಂ ನಿತ್ಯಾಯೈ ನಮಃ |
ಓಂ ಮುದಿತಮಾನಸಾಯೈ ನಮಃ |
ಓಂ ವಾಸವ್ಯೈ ನಮಃ |
ಓಂ ವರದಾಯೈ ನಮಃ | (50)
ಓಂ ಅವಾಚ್ಯಾಯೈ ನಮಃ |
ಓಂ ಕತ್ರ್ಯೈ ನಮಃ |

ಓಂ ಸರ್ವಾರ್ಥಸಾಧನಾಯೈ ನಮಃ |
ಓಂ ವಾಗೀಶ್ವರ್ಯೈ ನಮಃ |
ಓಂ ಸರ್ವವಿದ್ಯಾಯೈ ನಮಃ |
ಓಂ ಮಹಾವಿದ್ಯಾಯೈ ನಮಃ |
ಓಂ ಸುಶೋಭನಾಯೈ ನಮಃ |
ಓಂ ಶೋಭಾಯೈ ನಮಃ |
ಓಂ ವಂಶಕತ್ರ್ಯೈ ನಮಃ |
ಓಂ ಲೀಲಾಯೈ ನಮಃ | (60)
ಓಂ ಮಾನಿನ್ಯೈ ನಮಃ |
ಓಂ ಪರಮೇಷ್ಠಿನ್ಯೈ ನಮಃ |
ಓಂ ತ್ರೈಲೋಕ್ಯಸುಂದರ್ಯೈ ನಮಃ |
ಓಂ ಜ್ಞಾನಸುಂದರ್ಯೈ ನಮಃ |
ಓಂ ಕಾಮಚಾರಿಣ್ಯೈ ನಮಃ |
ಓಂ ವಿರೂಪಾಯೈ ನಮಃ |
ಓಂ ಸುರೂಪಾಯೈ ನಮಃ |
ಓಂ ಭೀಮಾಯೈ ನಮಃ |
ಓಂ ಮೋಕ್ಷಪ್ರದಾಯಿನ್ಯೈ ನಮಃ |
ಓಂ ಭಕ್ತಾರ್ತಿನಾಶಿನ್ಯೈ ನಮಃ | (70)
ಓಂ ಭವ್ಯಾಯೈ ನಮಃ |
ಓಂ ಭಾವವಿನಾಶಿನ್ಯೈ ನಮಃ |
ಓಂ ವಿಕೃತ್ರ್ಯೈ ನಮಃ |
ಓಂ ಶಾಂಕರ್ಯೈ ನಮಃ |
ಓಂ ಶಾಸ್ತ್ರ್ಯೈ ನಮಃ |
ಓಂ ಯಕ್ಷಗಂಧರ್ವಸೇವಿತಾಯೈ ನಮಃ |
ಓಂ ವೈಶ್ವಾನರ್ಯೈ ನಮಃ |
ಓಂ ಮಹಾಶೀಲಾಯೈ ನಮಃ |
ಓಂ ದೇವಾ ಸೇನಾಪ್ರಿಯಾಯೈ ನಮಃ |
ಓಂ ಭರ್ತಸೇವಾಪರಾಯಣಾಯೈ ನಮಃ | (80)
ಓಂ ಗುಹಾವತ್ಸಲಾಯೈ ನಮಃ |
ಓಂ ಹಿರಣ್ಮಯೈ ನಮಃ |
ಓಂ ಮಹಾದಾತ್ರ್ಯೈ ನಮಃ |
ಓಂ ಸಂಸಾರಪರಿವರ್ತಿಕಾಯೈ ನಮಃ |
ಓಂ ಸುಮಾಲಿನ್ಯೈ ನಮಃ |
ಓಂ ಸುರೂಪಾಯೈ ನಮಃ |
ಓಂ ತಾರಿಣ್ಯೈ ನಮಃ |
ಓಂ ವಾದಿನ್ಯೈ ನಮಃ |
ಓಂ ಪ್ರಭಾಯೈ ನಮಃ |
ಓಂ ಜಗತ್ಪ್ರಿಯಾಯೈ ನಮಃ | (90)

ಓಂ ಜಗನ್ಮೂರ್ತ್ಯೈ ನಮಃ |
ಓಂ ಶ್ರೀಮೂರ್ತ್ಯೈ ನಮಃ |
ಓಂ ಅಮೃತಾಶ್ರಯಾಯೈ ನಮಃ |
ಓಂ ನಿರಾಶ್ರಯಾಯೈ ನಮಃ |
ಓಂ ನಿರಾಹಾರಾಯೈ ನಮಃ |
ಓಂ ಪತಿಭಕ್ತಿವಿರಾಜಿತಾಯೈ ನಮಃ |
ಓಂ ಶ್ರೀಸತ್ಯೈ ನಮಃ |
ಓಂ ಶ್ರೀಮತ್ಯೈ ನಮಃ |
ಓಂ ಶ್ರೀಶಾಯೈ ನಮಃ |
ಓಂ ಶ್ರೀನಿವಾಸಯೈ ನಮಃ | (100)
ಓಂ ಹರಿಪ್ರಿಯಾಯೈ ನಮಃ |
ಓಂ ಶ್ರೀಕರ್ಯೈ ನಮಃ |
ಓಂ ಭಕ್ತಾನುಕಂಪಾಯೈ ನಮಃ |
ಓಂ ಶ್ರೀಧರಯೈ ನಮಃ |
ಓಂ ಜನಕಾತ್ಮಜಾಯೈ ನಮಃ |
ಓಂ ಪುರಾವೇದಾವತೀರೂಪಾಯೈ ನಮಃ |
ಓಂ ಸದಾಹನುಮದಾಶ್ರಿತಾಯೈ ನಮಃ |
ಓಂ ಸರಸಾಮೃತದಾತ್ಯೈ ನಮಃ |
ಓಂ ಶ್ರೀ ಪಟ್ಟಾಭಿರಾಮ ಪ್ರಿಯಾಂಗನಾಯೈ ನಮಃ | (109)

**|| ಶ್ರೀ ಸೀತಾಷ್ಟೋತ್ತರ ಅಷ್ಟೋ ಶತನಾಮಾವಳಿ: ಸಮಾಪ್ತಂ ||**

***********

# ಶ್ರೀ ರಾಮ ದ್ವಾದಶನಾಮಗಳು

ಪ್ರಥಮಂ ಶ್ರೀಧರಂ ನಾಮ ದ್ವಿತೀಯಂ ದಶರಥಾತ್ಮಜಮ್ |
ತೃತೀಯಂ ರಾಮಚಂದ್ರಂ ಚ ಚತುರ್ಥಂ ರಾವಣಾಂತಕಂ |
ಪಂಚಮಂ ಲೋಕಪೂಜ್ಯಂ ಚ ಷಷ್ಠ ಶ್ರೀ ಜಾನಕೀಪ್ರಿಯಂ |
ಸಪ್ತಮಂ ವಾಸುದೇವಂ ಚ ಶ್ರೀರಾಮಂ ಚಾಷ್ಟಮಂ ತಥಾ |
ನವಮಂ ಫಾಲಚಂದ್ರಂ ದಶಮಂ ಲಕ್ಷ್ಮಣಾಗ್ರಜಂ |
ಏಕಾದಶಂ ಚ ಗೋವಿಂದಂ ದ್ವಾದಶಂ ಸೇತುಬಂಧನಂ ||

***********

# ಶ್ರೀ ರಾಮ ರಕ್ಷಾ ವ್ರತ

## ಪ್ರಥಮ ಅಧ್ಯಾಯ

## **ವಿಕ್ರಮ ವರ್ಮ ಕಥೆ**

ಶ್ರೀ ರಾಮಚಂದ್ರನು ಆಶ್ರಿತಜನ ವತ್ಸಲನು. ನಂಬಿದವರನ್ನು ನಿತ್ಯ ರಕ್ಷಿಸುವ ಅಮೃತಮೂರ್ತಿ. ತನ್ನ ಭಕ್ತರೆಂದರೆ ಬಹಳ ಅನುರಾಗ, ಅಪ್ಯಾಯತೆ ಇರುವವನು. ಭಕ್ತವತ್ಸಲನಾದ ಆ ಸ್ವಾಮಿಯು 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಈ ವ್ರತವನ್ನು ಅನುಗ್ರಹಿಸಿದನು. ಈ ವ್ರತವನ್ನು ನಿರ್ಮಲ ಮನಸ್ಸಿನಿಂದ, ಭಕ್ತಿಯಿಂದ ಆಚರಿಸಿದವರಿಗೆ ಸರ್ವ ಸೌಭಾಗ್ಯಗಳು ದೊರಕುತ್ತದೆ ಎಂದು ಆ ಸ್ವಾಮಿಯೇ ತಿಳಿಸಿದ್ದಾನೆ. ಈ ವ್ರತ ಕಥೆಗಳನ್ನು ಭಕ್ತಿಯಿಂದ ಹೇಳಿದವರಿಗೆ, ಕೇಳಿದವರಿಗೆ, ಪ್ರಸಾದವನ್ನು ಸ್ವೀಕರಿಸಿದವರಿಗೆ ಯಾವುದೇ ಆಪತ್ತುಗಳು ಉಂಟಾಗುವುದಿಲ್ಲ. ಕೈಹಿಡಿದ ಕೆಲಸಕಾರ್ಯಗಳಲ್ಲಿ ಶ್ರೇಯಸ್ಸು ಉಂಟಾಗುತ್ತದೆಂದು ಸ್ವಾಮಿಯೇ ತಿಳಿಸಿದ್ದಾನೆ.

ಪೂರ್ವಕಾಲದಲ್ಲಿ ಕಳಿಂಗ ರಾಜ್ಯವನ್ನು ವಿಕ್ರಮ ವರ್ಮನೆಂಬ ರಾಜನು ಪರಿಪಾಲಿಸುತ್ತಿದ್ದನು. ವಿಕ್ರಮ ವರ್ಮನು ಶ್ರೀ ರಾಮಚಂದ್ರನ ಮಹಾಭಕ್ತನು. ತನ್ನ ರಾಜ್ಯವನ್ನು ಶ್ರೀ ರಾಮರಾಜ್ಯದ ಮಾದರಿಯನ್ನಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿದ್ದನು. ವಿಕ್ರಮ ವರ್ಮನ ಆಡಳಿತದಲ್ಲಿ ರಾಜ್ಯವು ಸುಭಿಕ್ಷದಿಂದ ಕೂಡಿತ್ತು. ತಾನು ನಂಬಿದ ಆ ಶ್ರೀ ರಾಮಚಂದ್ರನೇ ಈ ರಾಜ್ಯವನ್ನು ಕಾಪಾಡುತ್ತಿದ್ದಾನೆಂದು ಭಾವಿಸಿ, ಪ್ರತಿ ಸಂವತ್ಸರವು 'ಶ್ರೀ ರಾಮ ನವಮಿ' ಉತ್ಸವವನ್ನು ಅತ್ಯಂತ ಭಕ್ತಿಶ್ರದ್ಧೆಗಳಿಂದ ನಿರ್ವಹಿಸುತ್ತಿದ್ದನು. ಸಾಮ್ರಾಜ್ಯದ ಪ್ರತಿಯೊಂದು ಮೂಲೆ ಮೂಲೆಯಲ್ಲೂ ಶ್ರೀ ಸೀತಾರಾಮಚಂದ್ರರ ಕಲ್ಯಾಣೋತ್ಸವವನ್ನು ಬಹು ವಿಜೃಂಭಣೆಯಿಂದ ಜರುಗಿಸುತ್ತಿದ್ದರು. ಆ ಹತ್ತುದಿನಗಳು ಸಾಮ್ರಾಜ್ಯವೆಲ್ಲಾ ಹಬ್ಬದ ವಾತಾವರಣವನ್ನು ಪಡೆಯುತ್ತಿತ್ತು.

ಎಲ್ಲಾ ಭೋಗಭಾಗ್ಯಗಳು ಇದ್ದರೂ, ವಿಕ್ರಮ ವರ್ಮನಿಗೆ ಸಂತಾನಭಾಗ್ಯವಿಲ್ಲದ್ದು ಬಹಳ ನೋವುಂಟು ಮಾಡುತ್ತಿತ್ತು. ಸಂತಾನಕ್ಕಾಗಿ ರಾಜ ದಂಪತಿಗಳಿಬ್ಬರೂ ಅನೇಕ ಪೂಜೆಪುನಸ್ಕಾರಗಳನ್ನು ಮಾಡಿದರು. ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಆದರೆ, ಯಾವುದೇ ಫಲಸಿಗಲಿಲ್ಲ. ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ರಾತ್ರಿ ವಿಕ್ರಮ ವರ್ಮನಿಗೆ ಸ್ವಪ್ನದಲ್ಲಿ ಒಂದು ಶಿಥಿಲವಾದಂತಹ ಆಲಯವು ಕಾಣಿಸಿತು. ಅದೇನೆಂದು ರಾಜನಿಗೆ ಅರ್ಥವಾಗಲಿಲ್ಲ. ಮರುದಿನ ಬೆಳಿಗ್ಗೆ ವಿಕ್ರಮ ವರ್ಮನು ಆಸ್ಥಾನ ಪುರೋಹಿತನನ್ನು ಕರೆದು, ತನಗೆ ಬಂದ ಸ್ವಪ್ನದ ಕುರಿತು ಹೇಳಿದನು. ಆ ಸ್ವಪ್ನದ ಅರ್ಥವೇನಾಗಿರಬಹುದೆಂದು ಕೇಳಿದನು. ಪುರೋಹಿತನು ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಿಸಿ ರಾಜನೊಂದಿಗೆ ಹೀಗೆ ಹೇಳಿದನು. 'ರಾಜಾ! ನಿಮಗೆ ಸ್ವಪ್ನದಲ್ಲಿ ಕಾಣಿಸಿದ್ದು ಪುರಾತನವಾದ ಶ್ರೀ ರಾಮಚಂದ್ರನ ದೇವಾಲಯ. ಇದು ನಮ್ಮ ದೇಶದಲ್ಲೇ ಎಲ್ಲೋ ಇರಬಹುದು. ನೀವು ಆ ದೇವಾಲಯವನ್ನು ಪುನಃ ಸುಂದರವಾಗಿ ಕಟ್ಟಿಸುತ್ತೇನೆಂದು ಸಂಕಲ್ಪಮಾಡಿದರೆ, ನಿಮಗೆ ತಪ್ಪದೆ ಉತ್ತಮ ಸಂತಾನಭಾಗ್ಯವು ಉಂಟಾಗುತ್ತದೆ' ಎಂದೇ ಹೇಳಿದನು. 'ಮತ್ತೆ ಆ ದೇವಾಲಯವು ಎಲ್ಲಿದೆಯೋ ಹೇಗೆ ಗೊತ್ತಾಗುತ್ತದೆ?' ಎಂದು ರಾಜನು ಕೇಳಿದಾಗ, ಆ ಪುರೋಹಿತನು 'ಆ ವಿಷಯವು ಸ್ವಲ್ಪದಿನಗಳಲ್ಲೇ ತಿಳಿಯುತ್ತದೆ' ಎಂದನು. ವಿಕ್ರಮ ವರ್ಮನು ಆ ಪುರೋಹಿತನು ಹೇಳಿದ್ದನ್ನು

ಕೇಳಿ, ಶ್ರೀ ರಾಮಚಂದ್ರನನ್ನು ಮನಸ್ಸಿನಲ್ಲೇ ಪ್ರಾರ್ಥಿಸಿ ತನಗೆ ಒಳ್ಳೆಯ ಸಂತಾನವಾದರೆ, ಆ ದೇವಾಲಯವನ್ನು ಖಂಡಿತಾ ಪುನರುದ್ಧರಿಸುತ್ತೇನೆಂದು ಸಂಕಲ್ಪಮಾಡಿಕೊಂಡನು.

ಇದು ನಡೆದ ಕೆಲವು ದಿನಗಳಲ್ಲೇ ಮಹಾರಾಣಿಯು ಗರ್ಭವತಿಯಾಗಿ ಮುದ್ದಾದ ಮಗನನ್ನು ಹೆತ್ತಳು. ಅವನಿಗೆ ರಾಮ ವರ್ಮನೆಂದು ನಾಮಕರಣ ಮಾಡಿ, ಅತಿ ಪ್ರೀತಿಯಿಂದ ಸಾಕತೊಡಗಿದರು. ಕ್ರಮೇಣ ರಾಜನು ಶ್ರೀ ರಾಮಚಂದ್ರನಿಗೆ ಕೊಟ್ಟ ಮಾತನ್ನು ಮರೆತುಬಿಟ್ಟನು. ಒಂದುದಿನ ಒಬ್ಬ ಗ್ರಾಮಾಧಿಕಾರಿ ಬಂದು, ತನ್ನ ಗ್ರಾಮದಲ್ಲಿರುವ ಪುರಾತನ ಶ್ರೀ ರಾಮಚಂದ್ರನ ಆಲಯವನ್ನು ತಿರುಗಿ ಪುನಃ ಅಭಿವೃದ್ಧೀಕರಿಸಲು ಹಣ ಬೇಕು ಎಂದನು. ವಿಕ್ರಮ ವರ್ಮನು ಹಾಗೆ ಆಗಲೆಂದು ಹೇಳಿದನೇ ವಿನಃ, ಅವನಿಗೆ ಹಣವನ್ನುಕೂಡಾ ಕಳುಹಿಸಲು ಮರೆತುಬಿಟ್ಟನು. ಅವನಿಗೆ ಇಷ್ಟರವರೆಗೆ ಶ್ರೀ ರಾಮಚಂದ್ರನಿಗೆ ಕೊಟ್ಟ ಮಾತು ಕೂಡ ನೆನಪಿಗೆ ಬರಲಿಲ್ಲ. ಹೀಗಿರುವಾಗ, ಒಂದುದಿನ ರಾಜಕುಮಾರ ರಾಮ ವರ್ಮನಿಗೆ ತೀವ್ರವಾದ ಅನಾರೋಗ್ಯ ಉಂಟಾಯಿತು. ರಾಜವೈದ್ಯರುಗಳಿಗೆ ಕೂಡಾ ಆ ರೋಗವು ಯಾವುದೆಂದು ಕಂಡುಹಿಡಿಯಲಾಗಲಿಲ್ಲ. ಇಷ್ಟರಲ್ಲಿ ಆ ರಾಜ್ಯಕ್ಕೆ ಒಬ್ಬ ಸಾಧುವು ಬಂದನು. ಮಹಾಮಂತ್ರಿಯು ಆ ಸಾಧುವನ್ನು ರಾಜಮಂದಿರಕ್ಕೆ ಕರೆಯಿಸಿ, ರಾಜಕುಮಾರ ರಾಮ ವರ್ಮನಿಗೆ ಬಂದ ಅನಾರೋಗ್ಯದ ಬಗ್ಗೆ ತಿಳಿಸಿದನು. ಆಗ ಆ ಸಾಧುವು ಮಹಾರಾಜಾ ವಿಕ್ರಮ ವರ್ಮನೊಂದಿಗೆ ಹೀಗೆ ಹೇಳಿದನು. 'ರಾಜಾ! ನಿನ್ನ ರಾಜ್ಯದಲ್ಲಿ ಶ್ರೀ ರಾಮಗಿರಿ ಎಂಬ ಊರಿದೆ. ಅಲ್ಲಿರುವ ಶ್ರೀ ರಾಮಚಂದ್ರನನ್ನು ಆರಾಧಿಸಿದರೆ, ನಿನ್ನ ಮಗನ ಆರೋಗ್ಯದಲ್ಲಿ ಬದಲಾವಣೆ ತೋರಿಬರುತ್ತದೆ' ಎಂದು ಹೇಳಿದನು.

ಮರುದಿನವೇ ವಿಕ್ರಮ ವರ್ಮನು ಹೊರಟು ಶ್ರೀ ರಾಮಗಿರಿ ಊರಿಗೆ ಹೋಗಿ ಅಲ್ಲಿರುವ ಶ್ರೀ ಸೀತಾರಾಮಚಂದ್ರರ ದರ್ಶನವನ್ನು ಮಾಡಿಕೊಂಡು, ತಿರುಗಿ ತನ್ನ ರಾಜ್ಯಕ್ಕೆ ಪ್ರಯಾಣಿಸಿದನು. ಮಾರ್ಗ ಮಧ್ಯದಲ್ಲಿ ದಟ್ಟವಾದ ಅರಣ್ಯವು ಎದುರಾಯಿತು. ಕತ್ತಲಾದುದರಿಂದ, ರಾತ್ರಿ ಅಲ್ಲೇ ತನ್ನ ಪರಿವಾರದೊಂದಿಗೆ ವಿಶ್ರಮಿಸಿದನು. ರಾತ್ರಿಯ ಒಂದು ಸಮಯದಲ್ಲಿ, ಎಲ್ಲಿಂದ ಬಂತೋ ಏನೋ, ಒಂದು ಕೋತಿ ಬಂದು ಮಹಾರಾಜನ ಪಕ್ಕದಲ್ಲಿ ಜಿಗಿಯಿತು. ಬಹಳ ಮಂದಿ ಸೈನಿಕರಿದ್ದರೂ ತನ್ನ ಶಿಬಿರದೊಳಗೆ ಆ ಕೋತಿಯು ಹೇಗೆ ಬಂತೋ ರಾಜನಿಗೆ ಅರ್ಥವಾಗಲಿಲ್ಲ. ಅದು ರಾಜನ ಕೈಯನ್ನು ಹಿಡಿದುಕೊಂಡು ಮುಂದಕ್ಕೆ ಎಳೆಯತೊಡಗಿತು. ವಿಕ್ರಮ ವರ್ಮನಿಗೆ ಒಮ್ಮೆಲೇ ಭಯಹುಟ್ಟಿದರೂ ಈ ಕೋತಿಯು ಏನೋ ಹೇಳುತ್ತಿರುವ ಹಾಗೆ ಭಾಸವಾಯಿತು. ಆ ಕೋತಿಯು ರಾಜನನ್ನು ಶಿಬಿರದಿಂದ ಹೊರಗೆ ಕರೆದುಕೊಂಡು ಬಂದು, ಕಾಡಿನ ಒಳಗೆ ಕರೆದೊಯ್ಯತೊಡಗಿತು. ರಾಜನು ಏನೂ ಹೇಳದೆ, ಅದರ ಹಿಂದೆಯೇ ಹೊರಟನು. ಹಾಗೆ ಸ್ವಲ್ಪದೂರ ಹೋದಾಗ, ಎದುರಲ್ಲಿರುವ ಕೋತಿಯು ಪಕ್ಕದಲ್ಲಿರುವ ಮರದ ಮೇಲೆ ಜಿಗಿದು, ಕ್ಷಣದಲ್ಲಿ ಮಾಯವಾಯಿತು. ಎರಡು ಅಡಿ ಮುಂದಕ್ಕಿಟ್ಟ ವಿಕ್ರಮ ವರ್ಮನಿಗೆ ಒಂದು ಅದ್ಭುತ ದೃಶ್ಯ ಕಾಣಿಸಿತು. ಅದನ್ನು ನೋಡಿ, ಕೆಲವು ಸಂವತ್ಸರದ ಕೆಳಗೆ ತನಗೆ ಸ್ವಪ್ನದಲ್ಲಿ ಕಾಣಿಸಿದ ಶ್ರೀ ರಾಮಚಂದ್ರನ ಶಿಥಿಲಾಲಯ ನೆನಪಿಗೆ ಬಂತು. ಸಂದೇಹವಿಲ್ಲಾ! ಆ ಸ್ವಪ್ನದಲ್ಲಿ ಕಾಣಿಸಿದ್ದು ಇದೇ! ಈ ದೇವಾಲಯವೇ! ಮಹಾರಾಜನಿಗೆ ಕೂಡಲೇ ಆ ದಿನ ಶ್ರೀ ರಾಮಚಂದ್ರನಿಗೆ ಕೊಟ್ಟ ಮಾತು ನೆನಪಿಗೆ ಬಂತು. ತನಗೆ ಆ ದೇವಾಲಯವನ್ನು ತೋರಿಸಿದ್ದು ಸಾಕ್ಷಾತ್ ಶ್ರೀ ರಾಮಚಂದ್ರನ ಭಕ್ತನಾದ ಆಂಜನೇಯನೆಂದು ಭಾವಿಸಿದನು.

ತಿರುಗಿ ಶಿಬಿರಕ್ಕೆ ಬಂದ ರಾಜನು, ಮಹಾಮಂತ್ರಿಗೆ ಜರುಗಿದ ಸಂಗತಿಯನ್ನು ಹೇಳಿದನು. ಬೆಳಗಾದ ಕೂಡಲೇ ಎಲ್ಲರು ದೇವಾಲಯದ ಹತ್ತಿರ ಹೋದರು. ಮಹಾರಾಜನು ಕೂಡಲೇ ಆ ದೇವಾಲಯವನ್ನು ಪುನಃವೃದ್ಧಿಕರಿಸಲು ಆದೇಶಿಸಿದನು. ತಿರುಗಿ ರಾಜ್ಯವನ್ನು ಸೇರಿದ ವಿಕ್ರಮ ವರ್ಮನಿಗೆ, ರಾಜಕುಮಾರ ರಾಮ ವರ್ಮನು ಪೂರ್ತಿ ಆರೋಗ್ಯವಂತನಾಗಿರುವುದು ಕಾಣಿಸಿತು. ಹಿಂದೆ ಆ ಶ್ರೀ ರಾಮಚಂದ್ರುನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದೆ ಇದ್ದುದರಿಂದ, ರಾಜಕುಮಾರನಿಗೆ ಅನಾರೋಗ್ಯ ಉಂಟಾಯಿತೆಂದು ಭಾವಿಸಿದನು. ಆ ಸ್ವಾಮಿಯ ಅನುಗ್ರಹವು ಪುನಃ ಸಿಕ್ಕಿದಕ್ಕೆ ಸಂತೋಷಿಸಿದನು. ರಾಜಾಜ್ಞೆಯ ಪ್ರಕಾರ ಅರಣ್ಯದಲ್ಲಿರುವ ಶ್ರೀ ರಾಮನ ಆಲಯವನ್ನು ಅದ್ಭುತವಾಗಿ ನಿರ್ಮಿಸಿದರು. ಅಲ್ಲಿಗೆ ಹೋಗಿಬರಲು ರಾಜಮಾರ್ಗವನ್ನು ಕೂಡ ಏರ್ಪಾಟು ಮಾಡಿದರು. ಒಂದು ಸುಮುಹೂರ್ತದಲ್ಲಿ ಶ್ರೀ ಸೀತಾರಾಮಚಂದ್ರು ಮೂರ್ತಿಗಳನ್ನು ಪುನಃಪ್ರತಿಷ್ಠೆಮಾಡಿದರು. ಸ್ವಲ್ಪಸಮಯದಲ್ಲೇ ಮಹಾಮಹಿಮೆಯ ಪುಣ್ಯಕ್ಷೇತ್ರವೆಂದು ಪ್ರಸಿದ್ಧಿ ಪಡೆಯಿತು. ಅಲ್ಲಿ ಪೂಜಿಸಿಕೊಳ್ಳುತ್ತಿರುವ ಶ್ರೀ ಸೀತಾರಾಮಚಂದ್ರುರು ತಮ್ಮ ಸೇವೆಮಾಡಿದವರಿಗೆ ಸಕಲ ಸೌಭಾಗ್ಯಗಳನ್ನು ಅನುಗ್ರಹಿಸುವ ಅಮೃತಮೂರ್ತಿಯಾಗಿ ಹೆಸರುಪಡೆದರು.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ||

***********

ಎರಡನೇ ಅಧ್ಯಾಯ

# ಮಲ್ಲಣ್ಣ ಕಥೆ

ರಾಮ ಏವ ಪರಬ್ರಹ್ಮ ರಾಮ ಏವ ಪರಂ ತಪಃ |
ರಾಮ ಏವ ಪರಂ ತತ್ವಮ್ ಶ್ರೀ ರಾಮೋ ಬ್ರಹ್ಮತಾರಕಂ ||

ಶ್ರೀ ರಾಮನೇ ಪರಬ್ರಹ್ಮನು. ಶ್ರೀ ರಾಮನೇ ಪರಮ ತಪಸ್ಸು. ಶ್ರೀ ರಾಮನೇ ಪರತತ್ವನು. ಶ್ರೀ ರಾಮನೇ ತಾರಕಬ್ರಹ್ಮನು. ಸಕಲ ಜೀವಿಗಳಿಗೂ ಆಧಾರಭೂತನಾದ ಶ್ರೀಮನ್ನಾರಾಯಣನೇ ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರುನಾಗಿ ಬೆಳಗಿದನು. ಆ ಭಕ್ತವತ್ಸಲನು 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಅನುಗ್ರಹಿಸಿದ 'ಶ್ರೀ ರಾಮ ರಕ್ಷಾ ವ್ರತ'ದ ಎರಡನೇ ಕಥೆಯನ್ನು ನೋಡುವ.

ಪೂರ್ವಕಾಲದಲ್ಲಿ ರಾಮಾಪುರಂ ಎಂಬ ಗ್ರಾಮದಲ್ಲಿ ಶ್ರೀ ರಾಮಚಂದ್ರು, ಸೀತಾ, ಲಕ್ಷ್ಮಣ ಸಮೇತ ಆಂಜನೇಯ ಸ್ವಾಮಿಯ ದೇವಾಲಯವಿತ್ತು. ದೇವಾಲಯವು ಊರಿನ ಒಂದು ಕೊನೆಯಲ್ಲಿ, ಪಕ್ಕದಲ್ಲೇ ಸುಂದರವಾದ ಸರೋವರದಿಂದ ನೋಡಲು ತುಂಬಾ ಆಹ್ಲಾದಕರವಾಗಿತ್ತು. ಪ್ರತಿ ಸಂವತ್ಸರವು 'ಶ್ರೀ ರಾಮ ನವಮಿ' ಉತ್ಸವಗಳು ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಹಾಗೆ ಪ್ರತಿ ಸಂವತ್ಸರವು ಪಕ್ಕದಲ್ಲಿರುವ ಸರೋವರದಲ್ಲಿ ಶ್ರೀ ಸ್ವಾಮಿಯ ತೆಪ್ಪೋತ್ಸವಗಳು ರಂಗುರಂಗಿನ ವೈಭವದಿಂದ ಜರುಗುತ್ತಿತ್ತು. ಅಲ್ಲಿಯ ಸನ್ನಿಧಾನದಲ್ಲಿರುವ ಶ್ರೀ ರಾಮಚಂದ್ರುನ ಪರಿವಾರ ಮೂರ್ತಿಗಳು ಬಹಳ ಸುಂದರವಾಗಿ, ಆ

ವೈಭವವನ್ನು ನೋಡಲು ಎರಡು ಕಣ್ಣುಗಳು ಸಾಕಾಗುವುದಿಲ್ಲವೆಂಬಂತೆ ಅತ್ಯಂತ ಮನೋಹರವಾಗಿದ್ದವು.

ಆ ದೇವಾಲಯದಲ್ಲಿ ಮಲ್ಲಣ್ಣನೆಂಬ ಕೆಲಸದವನಿದ್ದನು. ಮಲ್ಲಣ್ಣನು ದಿನಾಲು ಮುಂಜಾನೆದ್ದು ದೇವಾಲಯವನ್ನು ಗುಡಿಸಿ, ಸ್ವಚ್ಚಗೊಳಿಸುತ್ತಿದ್ದನು. ಬಡತನದಿಂದಾಗಿ ಓದುಬರಹ ಏನೂ ಕಲಿಯದಿದ್ದುದರಿಂದ, ಅಲ್ಲಿ ದೇವಾಲಯದ ಕೆಲಸಕ್ಕೆ ಸೇರಿ, ಪ್ರತಿದಿನ ಬಹಳ ಶ್ರದ್ಧೆಯಿಂದ ದೇವಾಲಯಕ್ಕೆ ಸಂಬಂಧಿಸಿದ ಕೆಲವನ್ನೆಲ್ಲಾ ನೋಡಿಕೊಳ್ಳುತ್ತಿದ್ದನು. ಪ್ರತಿದಿನ ಮುಂಜಾನೆ ದೇವರಿಗೆ ನಮಸ್ಕರಿಸುತ್ತಿದ್ದನು. ಹೆಂಡತಿ, ಮಗನೊಂದಿಗೆ ದೇವಾಲಯ ಆವರಣದ ಪಕ್ಕದಲ್ಲಿರುವ ಗುಡಿಸಲಿನಲ್ಲಿರುತ್ತಿದ್ದ.

ಹೀಗಿರುವಾಗ, ಪ್ರತಿವರುಷದ ಹಾಗೆ ಈ ಸಲ ಕೂಡಾ 'ಶ್ರೀ ರಾಮ ನವಮಿ' ಉತ್ಸವಗಳು ಬಂತು. ಪ್ರತಿದಿನ ಹಬ್ಬವೇ! ದೇವಾಲಯವನ್ನೆಲ್ಲಾ ಬಣ್ಣ ಬಣ್ಣದ ಹೂವಿನಹಾರಗಳಿಂದ ಅಲಂಕರಿಸಿದರು. ಮಲ್ಲಣ್ಣನಿಗೆ ಒಂದುಕ್ಷಣ ಕೂಡಾ ಪುರುಸೊತ್ತಿಲ್ಲ. ಪ್ರತಿದಿನ ಸಾಯಂಕಾಲದ ಸಮಯದಲ್ಲಿ ಪುರಾಣಕಥೆಗಳ ಪ್ರವಚನಗಳು ನಡೆಯುತ್ತಿತ್ತು. ಒಂದೊಂದುದಿನ ಒಬ್ಬೊಬ್ಬ ಪಂಡಿತನು ಬಂದು ಪುರಾಣಗಳಲ್ಲಿರುವ ಅನೇಕ ವಿಶೇಷಗಳನ್ನು ಬಹಳ ಸುಂದರವಾಗಿ ವಿವರಿಸುತ್ತಿದ್ದರು. ನಿತ್ಯವೂ ತುಂಬಾ ಭಕ್ತರು ಬರುತ್ತಿದ್ದರು. ಮಲ್ಲಣ್ಣನು ಕೂಡಾ ಪಕ್ಕದಲ್ಲೇ ನಿಂತುಕೊಂಡು ಆ ಪ್ರವಚನಗಳನ್ನು ಕೇಳುತ್ತಿದ್ದನು.

'ಶ್ರೀ ರಾಮ ನವಮಿ'ಯ ಹಿಂದಿನ ದಿನ ಸಾಯಂಕಾಲ, ಪಕ್ಕದ ಊರಿನಿಂದ ಬಂದ ಶಂಕರ ಶಾಸ್ತ್ರಿ ಎಂಬ ಮಹಾಪಂಡಿತನು 'ಶ್ರೀ ರಾಮ ನಾಮ'ದ ಬಗ್ಗೆ ಇರುವ ವಿಶಿಷ್ಟತೆಯನ್ನು ವಿವರಿಸುತ್ತಾ ಹೀಗೆ ಹೇಳಿದನು. 'ಈ ಸೃಷ್ಟಿಯಲ್ಲಿ ರಾಮನಾಮಕ್ಕೆ ಸಮಾನವಾದ ದಿವ್ಯನಾಮವು ಮತ್ತೊಂದಿಲ್ಲ. ಒಂದುಸಾರಿ ರಾಮನಾಮವನ್ನು ಜಪಿಸಿದರೆ, ಕೆಲವು ನೂರುಜನ್ಮಗಳ ಪಾಪಗಳು ನಶಿಸುತ್ತವೆ. ಪ್ರತಿದಿನ ಈ ದಿವ್ಯ ನಾಮವನ್ನು ಜಪಿಸಿದವರಿಗೆ ಸಕಲ ಸೌಭಾಗ್ಯಗಳು ಉಂಟಾಗುತ್ತದೆ. ಯಾವುದೇ ಅಪಾಯದಲ್ಲಿದ್ದರೂ ಒಂದುಸಾರಿ ರಾಮಾ ಎಂದು ಕರೆದರೆ, ಆ ಶ್ರೀ ಕೋದಂಡರಾಮನು ಆ ಭಕ್ತನನ್ನು ತಕ್ಷಣ ಆ ಆಪತ್ತಿನಿಂದ ರಕ್ಷಿಸುತ್ತಾನೆ. ಇಂಥಹ ಸುಲಭವಾದ, ಪವಿತ್ರವಾದ, ಬಹಳ ಪ್ರಭಾವಹೊಂದಿರುವ ನಾಮವು ಇನ್ನೊಂದಿಲ್ಲ. ಸಕಲ ದೇವತಾಗಣವು ಈ ಅದ್ಭುತ ರಾಮನಾಮವನ್ನೇ ನಿತ್ಯವು ಜಪಿಸುತ್ತಾರೆ. ಈ ರಾಮನಾಮದ ಜಪದ ಪ್ರಭಾವದಿಂದಲೇ ಅನೇಕ ಮುನೀಶ್ವರುಗಳು ತಮ್ಮ ತಮ್ಮ ದಿವ್ಯಶಕ್ತಿಗಳನ್ನು ಪಡೆದುಕೊಂಡಿದ್ದಾರೆ. ಎಲ್ಲಾ ಕಾಲದಲ್ಲೂ ದೇವತೆಗಳಿಗೂ, ಮಾನವರಿಗೂ ಈ ಶ್ರೀ ರಾಮನಾಮವೇ ಆಧಾರ' ಎಂದು ಹೇಳಿದನು.

ಶಂಕರ ಶಾಸ್ತ್ರಿಯು ಹೇಳಿದ ಮಾತುಗಳು ಮಲ್ಲಣ್ಣನ ಹೃದಯದಲ್ಲಿ ದೃಢವಾಗಿ ಸೇರಿತು. ತಾನು ನಿತ್ಯವು ಸೇವೆಮಾಡುತ್ತಿರುವ ಶ್ರೀ ರಾಮನ ನಾಮವು ಇಷ್ಟು ಶ್ರೇಷ್ಠ ಎಂದಾಯಿತು. ಏನೋ ಮಾಡುತ್ತಿದ್ದೇನೆ, ಆದರೆ ಇಂಥಹ ಅದ್ಭುತನಾದ ಶ್ರೀ ರಾಮಚಂದ್ರನ ಸೇವೆಯನ್ನು ಮಾಡುತ್ತಿದ್ದೇನೆಂದು ತಿಳಿಯದೇ ಹೋದೆನು ಎಂದು ಭಾವಿಸಿದನು. ಆದಿನ ರಾತ್ರಿ ಊಟಮಾಡಿ, ಮನೆಯವರೆಲ್ಲಾ ಮಲಗಿದರು. ಒಂದುಸಲ ಮಲ್ಲಣ್ಣನ ಮಗನು ಗಟ್ಟಿಯಾಗಿ ಕೂಗಿದನು. ಆ ಕೂಗಿನಿಂದ ಮಲ್ಲಣ್ಣ, ಹೆಂಡತಿ ಇಬ್ಬರೂ ಒಮ್ಮೆಲೇ ಎದ್ದು, ಮಗನಿಗೆ ಏನಾಯಿತೋ ಎಂದು ನೋಡಿದರು. ಮಗನು ಕಾಲನ್ನು ತೋರಿಸುತ್ತಾ ನೋವಿನಿಂದ ಒದ್ದಾಡುತ್ತಿದ್ದಾನೆ. ಇಷ್ಟರಲ್ಲಿ

ಒಂದು ಹಾವು ಸರಸರ ಹರಿಯುತ್ತಾ ಗುಡಿಸಲಿನಿಂದ ಹೊರಗೆ ಹೋಗುವುದು ಅವರಿಗೆ ಕಾಣಿಸಿತು. ಜರುಗಿದ ವಿಷಯ ಅರ್ಥವಾಯಿತು. ಆ ಹಾವೇ ಮಗನನ್ನು ಕಚ್ಚಿದೆ. ಇನ್ನು ಈ ಅರ್ಧರಾತ್ರಿಯ ಸಮಯದಲ್ಲಿ, ಮಗನನ್ನು ಕರೆದುಕೊಂಡು ಎಲ್ಲಿಗೆ ಹೋಗುವುದು? ವಾಸ್ತವವಾಗಿ ಮಗನು ನೋವಿನಿಂದ ಬೊಬ್ಬೆ ಹೊಡೆಯುತ್ತಾ, ಕದಲಲಾರದ ಪರಿಸ್ಥಿತಿಯಲ್ಲಿದ್ದಾನೆ. ಮಲ್ಲಣ್ಣ ದಂಪತಿಗಳ ಪರಿಸ್ಥಿತಿಯು ಕಣ್ಣೀರಿನಿಂದ ತುಂಬಿಹೋಯಿತು.

ಆಗ ಮಲ್ಲಣ್ಣನಿಗೆ ಒಮ್ಮೆಲೇ ಮನಸ್ಸಿನಲ್ಲಿ ಸಾಯಂಕಾಲ ಶಂಕರ ಶಾಸ್ತ್ರಿಯವರು ಪ್ರವಚನದಲ್ಲಿ ಹೇಳಿದ ಮಾತು ನೆನಪಾಯಿತು. ಯಾವುದೇ ಆಪತ್ತಿನಲ್ಲಿದ್ದರೂ ರಾಮ ಎಂದು ಕರೆದರೆ ಆ ಸ್ವಾಮಿಯು ಕಾಪಾಡುತ್ತಾನೆಂದು ಹೇಳಿದರು ಎಂದಾಲೋಚಿಸಿ ಕೂಡಲೇ ಮಗನ ಕಾಲಿಗೆ ಹಾವು ಕಚ್ಚಿದ ಗಾಯದ ಮೇಲೆ 'ರಾಮಾ' ಎಂದು ಗಟ್ಟಿಯಾಗಿ ಸ್ಮರಣೆ ಮಾಡುತ್ತಾ ಬಾಯಿಂದ ಊದಿದನು.  ಅಷ್ಟೇ! ಅದ್ಭುತ! ಆ ಹುಡುಗನ ನೋವು ಕ್ಷಣದಲ್ಲಿ ಮಾಯವಾಯಿತು. ಹಾವು ಕಡಿದ ಜಾಗದಲ್ಲಿ ಗಾಯವು ಕೂಡಾ ಮಾಯವಾಯಿತು. ಮಗನು ನಗುತ್ತಾ ಎದ್ದು ನಿಂತುಕೊಂಡನು. ಅದನ್ನು ನೋಡಿ ಮಲ್ಲಣ್ಣ ದಂಪತಿಗಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ.  ರಾಮಾ ರಕ್ಷಿಸಿದಿಯಾ ತಂದೇ! ಎಂದು ಆ ಸ್ವಾಮಿಯನ್ನು ಬಹಳ ಹೊಗಳಿದನು. ಮರುದಿನ 'ಶ್ರೀ ರಾಮ ನವಮಿ'ಯ ದಿನ, ಶ್ರೀ ಸೀತಾ ರಾಮರ ಕಲ್ಯಾಣೋತ್ಸವವನ್ನು ಕಣ್ಣಾರೆ ಕಂಡು ಅತ್ಯಾನಂದ ಪಟ್ಟರು. ಜೀವಿಸಿದಷ್ಟು ದಿನ ಆ ದಂಪತಿಗಳು, ಆ ಸ್ವಾಮಿಯ ಸೇವೆಯನ್ನು ಮಾಡುತ್ತಾ ಕೊನೆಗೆ ಮುಕ್ತಿಯನ್ನು ಪಡೆದರು. ಶ್ರೀ ರಾಮನಾಮಕ್ಕಿರುವ ಮಹಿಮೆ ಅಂಥದ್ದು. ಯಾರು ಭಕ್ತಿಯಿಂದ ಮನಸ್ಫೂರ್ತಿಯಾಗಿ ಆ ದಿವ್ಯನಾಮವನ್ನು ಜಪಿಸುತ್ತಾರೋ, ಅವರು ಯಾವುದೇ ಆಪತ್ತಿನಲ್ಲಿದ್ದರೂ, ಶ್ರೀ ರಾಮಚಂದ್ರನು ಕ್ಷಣದಲ್ಲೇ ಕಾಪಾಡುತ್ತಾನೆ.  ನಿತ್ಯ ಈ ರಾಮನಾಮವನ್ನು ಭಕ್ತಿಯಿಂದ ಜಪಿಸುವವರಿಗೆ ಯಾವುದೇ ಅನಾರೋಗ್ಯ ಉಂಟಾಗುವುದಿಲ್ಲ. ಸಕಲ ಸೌಭಾಗ್ಯಗಳು ದೊರಕುತ್ತವೆ.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್||

***********

ಮೂರನೇ ಅಧ್ಯಾಯ

# ರಾಮ ಶರ್ಮ ಕಥೆ

ಪೂರ್ವಕಾಲದಲ್ಲಿ ಗೋದಾವರಿ ನದಿತೀರದಲ್ಲಿ ರಾಮ ಶರ್ಮನೆಂಬ ಮಹಾಪಂಡಿತನು ಇದ್ದನು. ಎಲ್ಲಾ ಶಾಸ್ತ್ರಗಳಲ್ಲಿ ಬಹಳ ಪಾಂಡಿತ್ಯವನ್ನು ಪಡೆದುಕೊಂಡಿದ್ದರೂ, ಅಹಂಕಾರವಿಲ್ಲದೆ ವಿನಮ್ರನಾಗಿರುತ್ತಿದ್ದನು. ರಾಮ ಶರ್ಮನಿಗೆ ಶ್ರೀ ರಾಮಚಂದ್ರನೆಂದರೆ ಅಪರಿಮಿತವಾದ ಭಕ್ತಿ. ಯಾವಾಗಲೂ ಆ ಶ್ರೀ ರಾಮಚಂದ್ರನನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಿದ್ದನು. ತನ್ನ ಹತ್ತಿರ ಸಲಹೆಗಳಿಗಾಗಿ ಬರುವವರಿಗೆಲ್ಲಾ ಆ ಶ್ರೀ ರಾಮನನ್ನೇ ಪೂಜಿಸಿರೆಂದು ಹೇಳುತ್ತಿದ್ದನು. ಯಾವುದೇ ಆಪತ್ತಿನಿಂದ ಕಾಪಾಡುವ ಅದ್ಭುತದೈವ, ಆ ಶ್ರೀ ರಾಮಚಂದ್ರನೇ ಎಂದು ಹೇಳುತ್ತಿದ್ದನು.

ರಾಮ ಶರ್ಮನ ಹೆಂಡತಿ ವೈದೇಹಿ. ದಂಪತಿಗಳು ಬಹಳ ಅನ್ಯೋನ್ಯವಾಗಿರುತ್ತಿದ್ದರು. ಅವರಿಗೆ ವನಜ, ಗಿರಿಜ ಎಂಬ ಇಬ್ಬರು ಹೆಣ್ಣುಮಕ್ಕಳು. ಇಬ್ಬರಿಗೂ ವಿವಾಹಯೋಗ್ಯ ವಯಸ್ಸಾಯಿತು. ಇನ್ನು ಒಳ್ಳೆಯ ವರನನ್ನು ನೋಡಿ ಹೆಣ್ಣುಮಕ್ಕಳಿಬ್ಬರಿಗೂ ವಿವಾಹ ಮಾಡಬೇಕೆಂದು ಆ ದಂಪತಿಗಳು ನಿಶ್ಚಯಿಸಿದರು. ಇಬ್ಬರಿಗೂ ಉತ್ತಮ ವರನು ಸಿಗುವಭಾಗ್ಯವನ್ನು ಅನುಗ್ರಹಿಸಬೇಕೆಂದು ಆ ಶ್ರೀ ರಾಮಚಂದ್ರನನ್ನೇ ಬೇಡಿಕೊಂಡರು. ಮಹಾಪ್ರಯತ್ನವನ್ನು ಮಾಡಿದರು.

ಶ್ರೀ ರಾಮಚಂದ್ರನ ದಯೆಯಿಂದ ಕೆಲವೇ ದಿನಗಳಲ್ಲಿ ದೊಡ್ಡಮಗಳು ವನಜಗೆ ಒಳ್ಳೆಯ ಸಂಬಂಧ ದೊರಕಿತು. ಊರ ಹತ್ತಿರದ ಗ್ರಾಮದಲ್ಲಿರುವ ಶ್ರೀನಿವಾಸ ಶರ್ಮನ ಮಗ ವಿಷ್ಣು ಶರ್ಮನೊಟ್ಟಿಗೆ ವಿವಾಹವು ನಿಶ್ಚಯವಾಯಿತು. ಶ್ರೀನಿವಾಸ ಶರ್ಮನದ್ದು ಕೂಡಾ ರಾಮ ಶರ್ಮನ ಹಾಗೆ ಒಳ್ಳೆಯ ಕುಟುಂಬ. ರಾಮ ಶರ್ಮನ ಬಗ್ಗೆ ತುಂಬಾ ಕೇಳಿದ್ದರು. ಯಾವುದೇ ವರದಕ್ಷಿಣೆಯಿಲ್ಲದೆ ವಿವಾಹವನ್ನು ಮಾಡಿಕೊಳ್ಳುತೇವೆ ಎಂದರು. ರಾಮ ಶರ್ಮ ದಂಪತಿಗಳು ಇಂಥಹ ಒಳ್ಳೆಯ ಸಂಬಂಧವು ಕೂಡಿಬಂದದ್ದು ಆ ಶ್ರೀ ರಾಮಚಂದ್ರನ ಅನುಗ್ರಹವೆಂದೇ ಭಾವಿಸಿದರು. ವನಜ – ವಿಷ್ಣು ಶರ್ಮರ ವಿವಾಹಕ್ಕೆ ಒಳ್ಳೆಯ ಮುಹೂರ್ತವನ್ನು ನಿಶ್ಚಯಿಸಿದರು.

ಇನ್ನು ನಾಳೆಯೇ ವಿವಾಹ. ಆ ದಿನ ಮುಂಜಾನೆ ವರನ ಕಡೆಯ ತಂಡದವರು ಬಂದರು. ಮರುದಿನ ಬೆಳಿಗ್ಗೆ 7:00 ಗಂಟೆಗೆ ವಿವಾಹ ಮುಹೂರ್ತ. ರಾತ್ರಿ ಊಟವಾಯಿತು. ಎರಡು ಕಡೆಯವರು ಕುಳಿತುಕೊಂಡು ಹರಟೆಹೊಡಿಯುತ್ತಿದ್ದರು. ಮಕ್ಕಳು ಆಚೆ-ಈಚೆ ಓಡುತ್ತಾ ಆಟವಾಡುತ್ತಿದ್ದರು. ಇಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ದೊಡ್ಡ ಬಿರುಗಾಳಿ ಏಳಿತು. ಅದರೊಟ್ಟಿಗೆ ಮಳೆಯೂ ಕೂಡಾ ಪ್ರಾರಂಭವಾಯಿತು. ಮದುವೆಗಾಗಿ ಹಾಕಿದ ಚಪ್ಪರವು ಒದ್ದೆಯಾಗತೊಡಗಿತು. ರಾಮ ಶರ್ಮನ ಎದೆಯಲ್ಲಿ ದುಃಖ ಗೂಡುಕಟ್ಟಿತು. ಏನಿದು ಅಕಾಲವರ್ಷ? ಎಲ್ಲರಿಗೂ ಎಷ್ಟು ತೊಂದರೆಯಾಗಿದೆಯೋ ಎಂದು ಬಾಧೆಪಟ್ಟನು. ಮಳೆ ಇನ್ನೂ ಜಾಸ್ತಿಯಾಯಿತು, ಇದಕ್ಕೆ ಗಾಳಿಯು ಕೂಡಾ ಸೇರಿ ಪಕ್ಕದಲ್ಲಿರುವ ಮರಗಳೆಲ್ಲಾ ತೂಗಾಡತೊಡಗಿದವು. ಈ ಮಳೆಯೂ ಹೀಗೆ ಮುಂದುವರಿದರೆ, ಇನ್ನು ಮದುವೆಗೆ ಹಾಕಿದ ಚಪ್ಪರವು ಹೆಚ್ಚುಹೊತ್ತುನಿಲ್ಲುವ ಹಾಗೆ ತೋರುತ್ತಿಲ್ಲ. ಇದನೆಲ್ಲಾ ನೋಡಿ ಬಾಧೆಪಡುತ್ತಿರುವ ರಾಮ ಶರ್ಮನಿಗೆ ಆ ಶ್ರೀ ರಾಮಚಂದ್ರನೇ ನೆನಪಿಗೆ ಬಂದನು. ರಾಮ ಶರ್ಮನು ಮನಸ್ಸಿನಲ್ಲಿ ಆ ಸ್ವಾಮಿಯನ್ನು ಹೀಗೆ ಪ್ರಾರ್ಥಿಸಿದನು. 'ಓ ಶ್ರೀ ರಾಮಚಂದ್ರ! ಪರಂಧಾಮ! ಪಾವನನಾಮಾ! ತಂದೆಯೇ ಏನಿದು ವೈಪರೀತ್ಯ? ನಾನೇನು ಪಾಪ ಮಾಡಿದೆನೆಂದು ನನಗೆ ಈ ಶಿಕ್ಷೆಯನ್ನು ಕೊಟ್ಟಿದ್ದಿ. ನಿನ್ನ ಅನುಗ್ರಹದಿಂದ, ಮಗಳ ಮದುವೆಯು ಒಳ್ಳೆಯ ವರನೊಂದಿಗೆ ನಿಶ್ಚಯವಾಯಿತೆಂದು ತುಂಬಾ ಸಂತೋಷಪಟ್ಟೆನು. ಬಹಳ ವೈಭವದಿಂದ ಜರುಗುತ್ತದೆಂದು ಆಶಿಸಿದೆನು. ಒಮ್ಮೆಲೇ ಏನಿದು ಮಳೆ? ಸ್ವಾಮೀ! ಈ ಸೃಷ್ಟಿಯೆಲ್ಲಾ ನಿನ್ನ ಅಧೀನವೇ ಅಲ್ವಾ? ದಯೆಯಿಟ್ಟು ನನ್ನ ಕರುಣೆಯ ಕೂಗನ್ನು ಆಲಿಸಿ, ಈ ಮಳೆ ಕಡಿಮೆಯಾಗುವ ಹಾಗೆ ಅನುಗ್ರಹಿಸು ತಂದೇ. 'ಅನಾಥೋ ದೈವ ರಕ್ಷಕ', ನಿನ್ನನ್ನು ಬಿಟ್ಟು ನನಗೆ ಬೇರೆ ದಿಕ್ಕಿಲ್ಲ. ನೀನೇ ನನಗೆ ತಂದೇ, ತಾಯಿ, ಗುರು, ಯಜಮಾನ ಕೂಡಾ. ನೀನೇ ನನ್ನ ಸರ್ವಸ್ವ. ದಯೆಯಿಟ್ಟು ಈ ದೀನನ ಕರುಣೆಯ ಕೂಗನ್ನು ಆಲಿಸು' ಎಂದು ಅನೇಕ ವಿಧಗಳಿಂದ ಪ್ರಾರ್ಥಿಸಿದನು.

ಭಕ್ತವತ್ಸಲನಾದ ಶ್ರೀ ರಾಮಚಂದ್ರನು ರಾಮ ಶರ್ಮನ ಪ್ರಾರ್ಥನೆಗೆ ಸ್ಪಂದಿಸಿದನು. ಅಷ್ಟೇ, ಆ ಮಳೆಯು ಒಮ್ಮೆಲೇ ನಿಂತುಹೋಯಿತು, ಗಾಳಿ ಕೂಡಾ ಕಡಿಮೆಯಾಯಿತು. ಮುಂಜಾನೆ ಮುಹೂರ್ತದ ಸಮಯದಲ್ಲಿ ಪ್ರಕೃತಿಯೆಲ್ಲಾ ಬಹಳ ಪ್ರಶಾಂತವಾಗಿ, ಆಹ್ಲಾದಕರವಾಗಿತ್ತು. ರಾಮ ಶರ್ಮ ದಂಪತಿಗಳು ತಮ್ಮನ್ನು ಅನುಗ್ರಹಿಸಿದಕ್ಕೆ ಆ ಶ್ರೀ ರಾಮಚಂದ್ರನನ್ನು ಅನೇಕ ವಿಧಗಳಿಂದ ಸ್ತುತಿಸಿದರು. ಅವರ ಕಣ್ಣಲ್ಲಿ ಆನಂದಭಾಷ್ಪಗಳು ಉದುರಿದವು. ವನಜ, ವಿಷ್ಣು ಶರ್ಮರ ವಿವಾಹವು ತುಂಬಾ ವೈಭವದಿಂದ ಜರುಗಿತು. ಸ್ವಲ್ಪ ಸಮಯದಲ್ಲೇ ಎರಡನೆಯ ಮಗಳು ಗಿರಿಜಳ ವಿವಾಹವು ಕೂಡಾ ಒಳ್ಳೆಯ ವರನೊಂದಿಗೆ ಶುಭಪ್ರದವಾಗಿ ಜರುಗಿತು.

ಶ್ರೀ ರಾಮಚಂದ್ರನು ಆಶ್ರಿತ ಜನ ವತ್ಸಲನು. ತನ್ನನ್ನು ನಂಬಿದವರನ್ನು ನಿತ್ಯವೂ ಕಾಪಾಡುವ ಅಮೃತಮೂರ್ತಿ. ಸ್ವಚ್ಛವಾದ ಮನಸ್ಸಿನಿಂದ ಜೀವಿಸುತ್ತಾ, ಭಕ್ತಿಯಿಂದ ನಿತ್ಯ ತನ್ನನ್ನೇ ಸ್ಮರಿಸುವವರನ್ನು ಯಾವಾಗಲೂ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಿರುತ್ತಾನೆ. ಅವರಿಗೆ ಸಕಲ ಸೌಭಾಗ್ಯಗಳನ್ನು ಅನುಗ್ರಹಿಸುತ್ತಾನೆ.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್||

*******

ನಾಲ್ಕನೇ ಅಧ್ಯಾಯ

## ರಾಮನಾಥನ ಕಥೆ

ಹಿಂದಿನಕಾಲದಲ್ಲಿ ಗೋದಾವರಿ ನದಿತೀರದಲ್ಲಿ ರಾಮನಾಥನೆಂಬ ಮೀನುಗಾರನು ಇದ್ದನು. ನದಿತೀರದಲ್ಲೇ ಇರುವ ಮೀನುಗಾರರ ಪ್ರದೇಶದಲ್ಲೇ ಗುಡಿಸಲು ಕಟ್ಟಿಕೊಂಡು ಹೆಂಡತಿ, ಮಕ್ಕಳೊಂದಿಗೆ ಸುಖವಾಗಿ ಜೀವಿಸುತ್ತಿದ್ದನು. ಸಹಮೀನುಗಾರರೊಂದಿಗೆ ನದಿಯಲ್ಲಿ ಮೀನುಗಾರಿಕೆಗೆ ಹೋಗಿ, ಸಿಕ್ಕಿದ ಮೀನುಗಳನ್ನು ಮಾರಾಟಮಾಡುತ್ತಾ ಇದ್ದನು. ಅವನಿಗೆ ಶ್ರೀ ರಾಮಚಂದ್ರನೆಂದರೆ ತುಂಬಾ ಪ್ರಾಣ. ಮೀನುಗಾರರ ವಸತಿಯ ಪಕ್ಕದಲ್ಲೇ ಒಂದು ಶ್ರೀ ರಾಮ ದೇವಾಯಲವಿತ್ತು. ಪ್ರತಿ ಸಂವತ್ಸರವು ಅಲ್ಲಿ 'ಶ್ರೀ ರಾಮ ನವಮಿ' ಉತ್ಸವಗಳು ಬಹಳ ವೈಭವದಿಂದ ಜರುಗುತ್ತಿತ್ತು. ಮೀನುಗಾರರೆಲ್ಲರೂ ಇದನ್ನು ರಾಮನ ಉತ್ಸವವೆಂದು ಬಹಳ ಭಕ್ತಿಭಾವದಿಂದ ಕರೆಯುತ್ತಿದ್ದರು. ರಾಮನ ಉತ್ಸವಕ್ಕಾಗಿ ಮೀನುಗಾರರೆಲ್ಲರೂ ತುಂಬಾನೇ ಎದುರುನೋಡುತ್ತಿದ್ದರು. ಬಹಳ ಸಂಭ್ರಮದಿಂದ ಆಚರಿಸುತ್ತಿದ್ದರು. ಸುತ್ತುಮುತ್ತಲ್ಲಿರುವ ಗ್ರಾಮಗಳಿಂದ ಜನರು ಬರುತ್ತಿದ್ದರು.

ರಾಮನಾಥನು ಕೂಡಾ ಎಲ್ಲರಂತೆ ಶ್ರೀ ರಾಮನೆಂದರೆ ತುಂಬಾ ಭಕ್ತಿಯುಳ್ಳವನಾಗಿದ್ದನು. ಪ್ರತಿದಿನ ಮೀನುಗಾರಿಕೆಗಾಗಿ ಗೋದಾವರಿ ನದಿಗೆ ತೆರಳುವ ಮುನ್ನ, ಶ್ರೀ ರಾಮಚಂದ್ರನಿಗೆ ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದನು. ಒಂದುದಿನ ಹಾಗೆ ಆ ಸ್ವಾಮಿಗೆ ಪ್ರಾರ್ಥನೆಯನ್ನು ಸಲ್ಲಿಸಿ, ಮತ್ತಿಬ್ಬರೊಟ್ಟಿಗೆ ಮೀನುಗಾರಿಕೆಗಾಗಿ ನದಿಗೆ ತೆರಳಿದನು. ಮೀನುಗಳು ಜಾಸ್ತಿ ಸಿಗದಿದ್ದುದರಿಂದ, ಮತ್ತಷ್ಟು ದೂರ ಹೋದರು. ಇಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ದಟ್ಟವಾದ ಕತ್ತಲೆ ಆವರಿಸಿತು. ಹತ್ತುನಿಮಿಷ ಕೂಡ ಆಗಲಿಲ್ಲ, ಜೋರಾದ ಮಳೆ ಶುರುವಾಯಿತು. ಇನ್ನು ಹಿಂದಕ್ಕೆ ಬಂದುಬಿಡೋಣವೆಂದು ಭಾವಿಸಿದನು. ಆದರೆ, ಆ ಮಳೆಯ ರಭಸವು ಇನ್ನು

ಜಾಸ್ತಿಯಾದುದರಿಂದ ದೋಣಿಯ ಮೇಲಿನ ನಿಯಂತ್ರಣವು ತಪ್ಪಿಹೋಯಿತು. ನದಿಯಲ್ಲಿ ನೀರಿನ ರಭಸ ಹೆಚ್ಚಾಯಿತು. ಒಮ್ಮೆಲೇ ದೋಣಿಯು ತಲೆಕೆಳಗಾಯಿತು. ರಾಮನಾಥನು ಸೇರಿ ಮೂವರು ನೀರಿನಲ್ಲಿ ಮುಳುಗಿದರು. ತಕ್ಷಣ ಎಲ್ಲರೂ ಆ ದೋಣಿಯನ್ನೇ ಭದ್ರವಾಗಿ ಹಿಡಿದುಕೊಂಡರು. ಮಳೆಯು ಜೋರಾಗಿ ಬರುವುದರಿಂದ ಈಜಲು ಕೂಡಾ ಕಷ್ಟವಾಗಿತ್ತು.

ಎಲ್ಲಿ ನೀರಲ್ಲಿ ಮುಳುಗಿಹೋಗುತ್ತೇವೋ ಎಂಬ ಭಯವು ಅವರನ್ನು ಆವರಿಸಿತು. ರಾಮನಾಥನು ಕೂಡಲೇ ತಾನು ನಂಬಿದ ಶ್ರೀ ರಾಮಚಂದ್ರನನ್ನು ನೆನೆದನು. 'ಸ್ವಾಮೀ! ಈ ಆಪತ್ತಿನಿಂದ ನಮ್ಮನ್ನು ಕಾಪಾಡು ತಂದೇ' ಎಂದು ಪ್ರಾರ್ಥಿಸಿದನು. ಅಷ್ಟೇ! ಆಪದ್ಬಾಂಧವನು, ಭಕ್ತವತ್ಸಲನಾದ ಶ್ರೀ ರಾಮಚಂದ್ರನು ಅವರ ಮೇಲೆ ಕರುಣೆ ತೋರಿದನು. ಒಂದೇಸಾರಿ, ನದಿಯೊಳಗಿಂದ ಒಂದು ದೊಡ್ಡ ಮೀನು ಒಮ್ಮೆಲೇ ಇವರ ದೋಣಿಯನ್ನು ಕೆಳಗಿನಿಂದ ಮೇಲೆಕ್ಕೆತ್ತಿತು. ಅಷ್ಟೇ, ದೋಣಿಯು ನೀರಿನ ಮೇಲೆ ಬಂದುಬಿಟ್ಟಿತು. ಮಳೆಯು ಕೂಡ ಕೆಳಮುಖವಾಯಿತು. ರಾಮನಾಥನು ತುಂಬಾ ಸಂತೋಷಿಸಿ, ಆ ಶ್ರೀ ರಾಮಚಂದ್ರನನ್ನು ಬಹಳ ಹೊಗಳಿದನು. ಎಲ್ಲರೂ ಕ್ಷೇಮವಾಗಿ ಪುನಃ ಗುಡಿಸಲನ್ನು ಸೇರಿದರು. ಆ ಸಂವತ್ಸರದ ಉತ್ಸವದಲ್ಲಿ ರಾಮನಾಥನು ಮತ್ತಷ್ಟು ಉತ್ಸಾಹದಿಂದ ಹಾಡಿ ಕುಣಿದನು.

ಶ್ರೀ ರಾಮಚಂದ್ರನು ಆಶ್ರೀತ ಭಕ್ತವತ್ಸಲನು. ತನ್ನನ್ನೇ ನಂಬಿ ಸ್ಮರಿಸುವವರನ್ನು ನಿತ್ಯ ರಕ್ಷಿಸುವ ಅಮೃತಮುರ್ತಿ. ಅವರಿಗೆ ಯಾವ ಶಾಸ್ತ್ರಗಳು, ಯಾವ ಪಾಂಡಿತ್ಯವೂ ಅವಸರವಿಲ್ಲ. ಎಂಥಹ ಅಜ್ಞಾನಿಯಾದರೂ ಸರಿ, ತನ್ನನ್ನು ನಂಬಿದರೆ ಸಾಕು. ಯಾವದೇ ರೀತಿಯ ಆಪತ್ತಿನಲ್ಲಿದ್ದರೂ ಕ್ಷಣದಲ್ಲಿ ಕಾಪಾಡುತ್ತಾನೆ. ಅಂಥಹಾ ಭಕ್ತಪರಾಯಣನಿಗೆ ಇವೇ ನಮ್ಮ ನಮಸ್ಕಾರಗಳು.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್||

***********

ಐದನೇ ಅಧ್ಯಾಯ

## ರಾಘವಾಚಾರ್ಯರ ಕಥೆ

ಪೂರ್ವಕಾಲದಲ್ಲಿ ರಾಘವಪುರಂನಲ್ಲಿ ವೀರರಾಘವಾಚಾರ್ಯ ಎಂಬ ಅರ್ಚಕನು ನಿವಾಸಿಸುತ್ತಿದ್ದನು. ಆ ಊರಲ್ಲಿರುವ ಶ್ರೀ ಸೀತಾರಾಮಚಂದ್ರರ ದೇವಾಲಯದಲ್ಲಿ ಅರ್ಚಕತ್ವವನ್ನು ನಿರ್ವಹಿಸುತ್ತಾ ಬಹಳ ನಿಮಯ ನಿಷ್ಠೆಗಳಿಂದ ಜೀವಿಸುತ್ತಿದ್ದನು. ಆ ಶ್ರೀ ರಾಮಚಂದ್ರನೇ ತನ್ನ ಸರ್ವಸ್ವವೆಂದು ಭಾವಿಸುತ್ತಿದ್ದನು. ಶ್ರೀ ರಾಮನ ಗುಣಗಣಗಳನ್ನು ಯಾರಾದರೂ ಹೇಳುತ್ತಿದ್ದರೆ ಕೇಳುತ್ತಾ ಸಂತೋಷಿಸುತ್ತಿದ್ದನು. ಆ ಶ್ರೀ ರಾಮನ ಹೆಸರನ್ನು ಕೇಳಿದರೆ ಸಾಕು, ರಾಘವಾಚಾರ್ಯರ ಶರೀರವು ಆನಂದದಿಂದ ಉಬ್ಬಿಹೋಗುತ್ತಿತ್ತು. ದೇವಾಲಯದ ಉತ್ಸವಗಳಲ್ಲಿ ಬಹಳ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದನು. ಉತ್ಸವಗಳು ಜರುಗುತ್ತಿರುವ ದಿನಗಳಲ್ಲಿ ಹಗಲು, ರಾತ್ರಿ ಆ ಸ್ವಾಮಿಯ ನಾಮವನ್ನು ಬಿಟ್ಟು ಬೇರೆ ಯಾವುದೇ ಧ್ಯಾನ ಇರುತ್ತಿರಲಿಲ್ಲ.

ಪ್ರತಿ ಸಂವತ್ಸರದ ಹಾಗೆ ಈ ಸಂವತ್ಸರ ಕೂಡಾ 'ಶ್ರೀ ರಾಮ ನವಮಿ' ಉತ್ಸವಗಳು ಬಂತು. ದೇವಾಲಯವನ್ನು ಬಣ್ಣ ಬಣ್ಣದ ಹೂಗಳಿಂದ ಅಲಂಕರಿಸಿದರು. ಪ್ರತಿದಿನ ಹೊಸ ಹೊಸ ಹೂವುಗಳನ್ನು ತಂದು ಮಾಲೆಗಳನ್ನು ಕಟ್ಟಿ ಧ್ವಜಸ್ತಂಭವನ್ನು ಅಲಂಕರಿಸುತ್ತಿದ್ದರು. ರಾಘವಪುರಂನಲ್ಲಿ 'ಶ್ರೀ ರಾಮ ನವಮಿ' ಉತ್ಸವಗಳೆಂದರೆ ಸುತ್ತಮುತ್ತಲ್ಲಿರುವ ಗ್ರಾಮದವರೆಲ್ಲರಿಗೂ ದೊಡ್ಡ ಹಬ್ಬ. ಎಲ್ಲೆಲ್ಲಿಂದಲೋ ಎತ್ತಿನಗಾಡಿ ಕಟ್ಟಿಕೊಂಡು ಬರುತ್ತಿದ್ದರು. ಊರಲ್ಲಿರುವ ಎಲ್ಲರ ಮನೆಗಳು ಅಥಿತಿಗಳಿಂದ ತುಂಬಿಹೋಗುತ್ತಿತ್ತು. ಹೆಣ್ಣುಮಕ್ಕಳು ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕುತ್ತಿದ್ದರು. ಗಂಡುಮಕ್ಕಳು ಬೀದಿಯಲ್ಲಿ ಮಾವಿನ ತೋರಣಗಳನ್ನು ಕಟ್ಟುತ್ತಿದ್ದರು. ಊರೆಲ್ಲಾ ಬಹಳ ನಯನ ಮನೋಹರವಾಗಿರುತ್ತಿತ್ತು.

ಆ ದಿನ ಶ್ರೀ ಸೀತಾರಾಮರ ಕಲ್ಯಾಣೋತ್ಸವವು ಬಹಳ ವಿಜೃಂಭಣೆಯಿಂದ ಜರುಗಿತು. ಪಕ್ಕದಲ್ಲೇ ಇದ್ದು ಕಲ್ಯಾಣೋತ್ಸವನ್ನು ಜರುಗಿಸುತ್ತಿರುವ ರಾಘವಾಚಾರ್ಯರು ತುಂಬಾ ಆನಂದಪಟ್ಟರು. ಆನಂತರ, ದೇವಾಲಯದ ಹಿರಿಯ ಅರ್ಚಕರಾದ ಕೃಷ್ಣಮಾಚಾರ್ಯರೊಟ್ಟಿಗೆ ಮಾತನಾಡುತ್ತಾ ಹೀಗೆ ಹೇಳಿದರು. 'ಶ್ರೀ ಸೀತಾರಾಮರ ಕಲ್ಯಾಣವು ಜಗತ್ತಿನ ಕಲ್ಯಾಣವು. ಸಮಸ್ತ ಶ್ರೇಯಸ್ಸುಗಳ ಸಂಕೇತ. ಈ ಕಲ್ಯಾಣವನ್ನು ಕಣ್ಣಾರೆ ನೋಡಿದವರ ಜನ್ಮವು ಧನ್ಯ. ಅವರ ಜೀವನವು ಬಹಳ ಶುಭಪ್ರದವಾಗಿ ನಡೆಯುತ್ತದೆ. ಯಾವುದಕ್ಕೂ ಕೊರತೆಯಿರುವುದಿಲ್ಲ' ಎಂದು ಹೇಳಿದರು. ಆ ದಿನ ರಾತ್ರಿಯ ಉತ್ಸವಗಳು ಪೂರ್ತಿಯಾದನಂತರ, ಎಲ್ಲರೂ ಮನೆ ಮುಟ್ಟುವಾಗ ಹತ್ತುಗಂಟೆಗಳಾಯಿತು.

ಮರುದಿನ ಮುಂಜಾನೆ ದೇವಾಲಯದೊಳಗೆ ಬಂದ ರಾಘವಾಚಾರ್ಯರಿಗೆ, ಸ್ವಾಮಿಯ ಮೂಲಮೂರ್ತಿಯ ಪಕ್ಕದಲ್ಲಿ ಇರಬೇಕಾದ ಉತ್ಸವಮೂರ್ತಿಗಳು ಕಾಣಿಸಲಿಲ್ಲ. ರಾಘವಾಚಾರ್ಯರು ತುಂಬಾ ಆತಂಕಪಟ್ಟರು. ನಿನ್ನೆ ರಾತ್ರಿ ಕೂಡಾ ಇದ್ದ ಮೂರ್ತಿಗಳಿಗೆ ಈಗ ಏನಾಯ್ತು? ಆಚಾರ್ಯರ ಕಣ್ಣಲ್ಲಿ ನೀರು ತುಂಬಿತು. ದೇವಾಲಯ ಪರಿಸರವನ್ನೆಲ್ಲಾ ಹುಡುಕಿದರು. ಎಲ್ಲಿಯೂ ಉತ್ಸವಮೂರ್ತಿಗಳು ಕಾಣಿಸಲಿಲ್ಲ. ಉಸಿರಿಡಿದುಕೊಂಡು ಓಡುತ್ತಾ, ದೇವಾಲಯ ಧರ್ಮಕರ್ತಮಂಡಳಿಯ ಅಧ್ಯಕ್ಷರ ಮನೆಗೆ ಹೋಗಿ, ಈ ಸಂಗತಿಯನ್ನು ಹೇಳಿದರು. ಇಬ್ಬರೂ ಕೂಡಿಕೊಂಡು ದೇವಾಲಯಕ್ಕೆ ಬಂದರು. ಸುವರ್ಣ ಲೇಪನದಿಂದ ಬಹಳ ದಿವ್ಯವಾಗಿ ಪ್ರಕಾಶಿಸುವ ಆ ಮೂರ್ತಿಗಳನ್ನು ಯಾರೂ ಕದ್ದುಕೊಂಡರೋ ಅರ್ಥವಾಗಲಿಲ್ಲ.

ಆ ದಿನ ರಾತ್ರಿ ರಾಘವಾಚಾರ್ಯರಿಗೆ ನಿದ್ರೆ ಬರಲಿಲ್ಲ. ಏನುಮಾಡಿದರೂ ಆ ದಿವ್ಯಮೂರ್ತಿಗಳೇ ಕಣ್ಣಿಗೆ ಕಾಣಿಸುತ್ತಿವೆ. 'ಸ್ವಾಮೀ, ಯಾರು ಇಂಥಹ ಅನ್ಯಾಯಕ್ಕೆ ಕೈಹಾಕಿದರು? ನಾನೇನು ಅಪರಾಧವನ್ನು ಮಾಡಿದೆನು? ಯಾವುದಾದರೂ ಅಪರಾಧವನ್ನು ಮಾಡಿದ್ದರೆ, ತಂದೆಯೇ ಕ್ಷಮಿಸು' ಎಂದು ಕಣ್ಣೀರು ಸುರಿಸುತ್ತಾ ಆ ಸ್ವಾಮಿಯನ್ನು ಬೇಡಿಕೊಂಡರು. ಇಷ್ಟರಲ್ಲಿ ಬೆಳಗಾಯಿತು. ದೇವಾಲಯಕ್ಕೆ ಹೊರಟರು. ದೇವಾಲಯದ ಹತ್ತಿರ ಬಂದ ಆಚಾರ್ಯರಿಗೆ ಅಲ್ಲಿ ಕಾಣಿಸಿದ ದೃಶ್ಯವನ್ನು ನೋಡಿ ಆಘಾತಕ್ಕೊಳಗಾದರು.

ದೇವಾಲಯ ಆವರಣದ ಹೊಸ್ತಿಲ ಒಳಗೆ ಒಬ್ಬ ವ್ಯಕ್ತಿ ಸ್ಪೃಹೆ ತಪ್ಪಿ ಬಿದ್ದಿದ್ದಾನೆ. ಪಕ್ಕದಲ್ಲೇ ಸ್ವಾಮಿಯವರ ಉತ್ಸವಮೂರ್ತಿಗಳಿವೆ. ಆಚಾರ್ಯರು ಕೂಡಲೇ ಪಕ್ಕದಲ್ಲೇ ಇರುವ

ಬಾವಿಯಿಂದ ನೀರು ತಂದು ಅವನ ಮುಖದ ಮೇಲೆ ಹಾಕಿದರು. ಸ್ವಲ್ಪ ಸಮಯಕ್ಕೆ ಆ ವ್ಯಕ್ತಿಗೆ ಎಚ್ಚರವಾಯಿತು. ಆ ವ್ಯಕ್ತಿಯು ತಕ್ಷಣ ಎದ್ದುನಿಂತು ರಾಘವಾಚಾರ್ಯರಿಗೆ ಎರಡು ಕೈಗಳಿಂದ ನಮಸ್ಕರಿಸುತ್ತಾ, ಕಣ್ಣೀರು ಸುರಿಸುತ್ತಾ ಹೀಗೆ ಹೇಳಿದನು. 'ಸ್ವಾಮೀ! ನಾನು ಮಹಾಪರಾಧವನ್ನು ಮಾಡಿದೆನು. ಕ್ಷಮಿಸಿ. ಮೊನ್ನೆರಾತ್ರಿ ಸ್ವಾಮಿಯ ವಿಗ್ರಹಗಳನ್ನು ಕದ್ದುಕೊಂಡು ಹೊರಗೆ ಬರುತ್ತಿರುವಾಗ ಯಾವುದೋ ಶಬ್ದವಾದುದರಿಂದ, ವಿಗ್ರಹಗಳನ್ನು ಮರುದಿವಸ ತೆಗೆದುಕೊಂಡು ಹೋಗಬಹುದೆಂದು ಭಾವಿಸಿ, ದೇವಾಲಯದ ಬಾವಿಯೊಳಗೆ ಹಾಕಿದೆನು. ತಿರುಗಿ ನಿನ್ನೆ ಅರ್ಧರಾತ್ರಿ ಬಂದು, ಬಾವಿಯಲ್ಲಿರುವ ಈ ವಿಗ್ರಹಗಳನ್ನು ತೆಗೆದುಕೊಂಡು ಹೊರಗೆ ಬರುತ್ತಿರುವಾಗ, ಆ ಹೊಸ್ತಿಲ ಹತ್ತಿರ ಒಂದು ಅದ್ಭುತವಾದ ತೇಜೋಮೂರ್ತಿಯು ಹೊಸ್ತಿಲಿಗೆ ಅಡ್ಡವಾಗಿ ನಿಂತುಕೊಂಡಿದ್ದನು. ಭುಜದ ಮೇಲೆ ದೊಡ್ಡ ಬಿಲ್ಲಿನಿಂದ ಕೂಡಿ ಪ್ರಕಾಶವಂತನಾಗಿದ್ದನು. ಆ ಮೂರ್ತಿಯನ್ನು ಒಂದುಕ್ಷಣ ಕೂಡಾ ನೋಡಲಾರದೇ, ಆ ತೇಜಸ್ಸನ್ನು ಸಹಿಸಿಕೊಳ್ಳಲಾಗದೇ, ಸ್ಪೃಹೆ ತಪ್ಪಿ ಬಿದ್ದೆನು. ಘೋರವಾದ ಅಪರಾಧವನ್ನು ಮಾಡಿದೆನು, ಕ್ಷಮಿಸಿ' ಎಂದು ಹೇಳಿದನು.

ಜರುಗಿದ ಸಂಗತಿ ರಾಘವಾಚಾರ್ಯರಿಗೆ ಅರ್ಥವಾಯಿತು. ಸಾಕ್ಷಾತ್ ಶ್ರೀ ರಾಮಚಂದ್ರನೇ ಈ ವಿಗ್ರಹಗಳು ದೇವಾಲಯದಿಂದ ಹೊರಗೆ ಹೋಗದ ಹಾಗೆ ರಕ್ಷಿಸಿದನು. 'ಸ್ವಾಮೀ, ನಿನ್ನನ್ನು ನೀನೇ ರಕ್ಷಿಸಿಕೊಂಡಿದ್ದೀಯಾ ತಂದೇ!' ಎಂದು ಆ ಸ್ವಾಮಿಯನ್ನು ಅನೇಕ ವಿಧಗಳಿಂದ ಸ್ತುತಿಸಿದರು. ಆ ವ್ಯಕ್ತಿಯನ್ನು ದೇವಾಲಯದ ಧರ್ಮಕರ್ತ ಮಂಡಳಿಯ ಅಧ್ಯಕ್ಷನ ಹತ್ತಿರ ಕರೆದುಕೊಂಡು ಹೋದರು. ಜರುಗಿದ ವಿಷಯವನ್ನೆಲ್ಲಾ ತಿಳಿದುಕೊಂಡು ತಪ್ಪು ಮಾಡಿದರೂ, ಆ ಸ್ವಾಮಿಯ ದರ್ಶನವಾದುದರಿಂದ ಅವನನ್ನು ಕ್ಷಮಿಸಿ ಬಿಟ್ಟುಬಿಟ್ಟರು. ರಾಘವಾಚಾರ್ಯರು ವಿಗ್ರಹಗಳನ್ನು ಪುನಃ ದೇವಾಲಯದೊಳಗೆ ತೆಗೆದುಕೊಂಡು ಬಂದು, ಶಾಸ್ತ್ರೋಕ್ತವಾಗಿ ಪೂಜೆಗಳನ್ನು ಮಾಡಿದರು. ಶಾಶ್ವತವಾಗಿ ಆ ಸ್ವಾಮಿಯ ಸೇವೆಯನ್ನು ಮಾಡುತ್ತಾ, ಜೀವನವನ್ನು ಸುಖದಿಂದ ಸಾಗಿಸಿ, ಕೊನೆಗೆ ಮುಕ್ತಿಯನ್ನು ಪಡೆದರು.

ಐದನೇ ಅಧ್ಯಾಯವು ಸಂಪೂರ್ಣವಾಯಿತು

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ||

ಶ್ರೀ ರಾಮ ರಕ್ಷಾ ವ್ರತ ಸಮಾಪ್ತಂ

*******

# ಮಂಗಳಾರತಿ

ರಾಮಚಂದ್ರಾಯ ಜನಕ ರಾಜಜಾಮನೋಹರಾಯ |
ಮಾಮಾಕಾಭಿಷ್ಟದಾಯ ಮಾಹಿತಾ ಮಂಗಳಂ || || ರಾಮ ||

ಕೋಸಲೇಶಾಯ ಮಂದಹಾಸ ದಾಸಪೋಷಣಾಯ |
ವಾಸವಾದಿ ವಿನುತ ಸದ್ವರದ ಮಂಗಳಂ || || ರಾಮ ||

ಚಾರು ಮೇಘರೂಪಾಯ ಚಂದನಾದಿ ಚರ್ಚಿತಾಯ |
ಹಾರ ಕಟಕ ಶೋಭಿತಾಯ ಭೂರಿ ಮಂಗಳಂ || || ರಾಮ ||

ಲಲಿತ ರತ್ನಮಂಡಲಾಯ ತುಳಸೀವನಮಾಲಿಕಾಯ |
ಜಲಜ ಸದೃಶ ದೇಹಾಯ ಚಾರು ಮಂಗಳಂ || || ರಾಮ ||

ದೇವಕೀ ಸುಪುತ್ರಾಯ ದೇವದೇವೋತ್ತಮಾಯ |
ಭಾವಜಾತ ಗುರುವರಾಯ ಭವ್ಯ ಮಂಗಳಂ || || ರಾಮ ||

ಪುಂಡರೀಕಾಕ್ಷಾಯ ಪೂರ್ಣಚಂದ್ರ ವದನಾಯ |
ಅಂಡಜ ವಾಹಾನಾಯ ಅತುಲ ಮಂಗಳಂ || || ರಾಮ ||

ವಿಮಲ ರೂಪಾಯ ವಿವಿಧ ವೇದಾಂತ ವೇದ್ಯಾಯ |
ಸುಮುಖ ಚಿತ್ತಕಾಮಿತಾಯ ಶುಭದ ಮಂಗಳಂ || || ರಾಮ ||

ರಾಮದಾಸಾಯ ಮೃದುಲ ಹೃದಯ ಕಮಲನಿವಾಸಾಯ |
ಸ್ವಾಮೀ ಭದ್ರಗಿರಿವರಾಯ ಸರ್ವ ಮಂಗಳಂ || || ರಾಮ ||

*******



ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ |
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ||



ಮಂಗಳಂ ಕೌಸಲೇಂದ್ರಾಯ ಮಹನೀಯ ಗುಣಾತ್ಮನೇ |
ಚಕ್ರವರ್ತಿ ತನೂಜಾಯ ಸಾರ್ವಭೌಮಾಯ ಮಂಗಳಮ್ ||